14. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

ವಿಷಯ:– ಡಾ: ಡಿ. ಎಂ. ನಂಜಂಡಪ್ಪ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸುವಾಗ ಅನುದಾನ ಹಂಚಿಕೆ ಮಾಡುವಲ್ಲಿ ಪಕ್ಷಪಾತ ಮಾಡಿದ್ದು ಅದರಿಂದ ಹಿಂದುಳಿದ ಪ್ರದೇಶಗಳಿಗೆ ಆಗುತ್ತಿರುವ ತಾರತಮ್ಯದ ಬಗ್ಗೆ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಶಾಸಕರ ಒಂದು ಸಭೆ ನಡೆದಿತ್ತು.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎನ್. ವೈ.ಗೋಪಾಲಕೃಷ್ಣ ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀಮಾನ್ ಬಿ.ಆರ್.ಪಾಟೀಲರು ಆಸಕ್ತಿವಹಿಸಿ ಎಲ್ಲಾ ಶಾಸಕರುಗಳು ಕೂಡ ನಂಜುಂಡಪ್ಪ ವರದಿ ಬಗ್ಗೆ ಮತ್ತು ಹಿಂದುಳಿದ ಪ್ರದೇಶಕ್ಕೆ ಸರ್ಕಾರ ಯಾವ ರೀತಿಯಾಗಿ ಮಲತಾಯಿ ಧೋರಣೆ ತೋರಿಸುತ್ತಿದೆ ಎನ್ನುವುದರ ಬಗ್ಗೆ ಚರ್ಚೆ ಮಾಡತಕ್ಕಂಥ ಸಭೆ ನಡೆಯಿತು. ಆ ಸಭೆಯಲ್ಲಿ ವಿಶೇಷವಾಗಿ ಎಂ.ಪಿ. ಪ್ರಕಾಶ್‌ರವರು ಕೂಡ ಪಾಲ್ಗೊಂಡಿದ್ದರು.

ಶ್ರೀ ಬಿ. ಆರ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, Planning Minister ರವರನ್ನು ಕರೆಸಬೇಕು. ಇದು ಅವರಿಗೆ ನೇರವಾಗಿ ಸಂಬಂಧಿಸಿದುದಾಗಿದೆ.

ಶ್ರೀ ಧರ್ಮಸಿಂಗ್: ಆ ಸಭೆಯಲ್ಲಿ, ನಾನು, ಖರ್ಗೆಯವರು, ಆ ಭಾಗದ ಕೆಲವು ಮಂತ್ರಿಗಳು ಏಕೋ ಬರಲಿಕ್ಕಾಗಲಿಲ್ಲ. ಅವರಿಗೇನೋ ಬೇರೆ ಕೆಲಸ ಇದ್ದಿರಬಹುದು. ಅಲ್ಲಿ ಸುಮಾರು 3 ಗಂಟೆಗಳ ಕಾಲ ಸುದೀರ್ಘವಾದ ಚರ್ಚೆಯಾಯಿತು. ತದನಂತರ 'ಒಂದು ವಿಶೇಷವಾದ ಸಭೆ ಕರೆಯಿರಿ ಎಂದ ಮುಖ್ಯಮಂತ್ರಿಗಳಿಗೆ ಕೂಡ ನಾವು ಮತ್ತು ಬಿ.ಆರ್.ಪಾಟೀಲರು ಕೇಳಿಕೊಂಡೆವು. ನಮಗೆ ಎಷ್ಟು ಅನ್ಯಾಯವಾಗಿದೆ, ಯಾವ ತರಹ ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ, ಪ್ರಾದೇಶಿಕ ಅಸಮತೋಲನ ದೂರ

ಮಾಡತಕ್ಕಂಥ ರೀತಿಯಲ್ಲಿ ನಮ್ಮ ಮಂಡಳಿ ಇದೆ. ಇಲ್ಲಿ ಒಂದು ಪ್ರಾದೇಶೀಕ ಅಭಿವೃದ್ಧಿ ಮಂಡಳಿಯಿದೆ. ಅದಕ್ಕೆ ಸರ್ಕಾರ ಹಣ ಕೊಡುತ್ತಾ ಬರುತ್ತಿದೆ. ಈಗ ಇವರು ಬಂದ ಮೇಲೆ ಸ್ವಲ್ಪ ಹಣ ಕಡಿಮೆಯಾಗಿದೆ. ಬಜೆಟ್‌ನಲ್ಲಿ ಕೊಡತಕ್ಕಂಥ ಹಣ ಬಿಟ್ಟು ಇಲ್ಲಿಗೆ ವಿಶೇಷವಾಗಿ ಕೊಡತಕ್ಕಂಥ ಹಣ. 1980ರಲ್ಲಿ ನಾವು ದೇಶದ ಎಲ್ಲಾ ಕಡೆಗೆ ಹೋಗಿ ಬಂದಿದ್ದೇವೆ. ನನ್ನ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಆಗಿತ್ತು. ನಾನು, ಮಲ್ಲಿಕಾರ್ಜುನ ಖರ್ಗೆಯವರು, ನಜೀರ್ ಅಹಮ್ಮದ್, ಸಿದ್ದಿಕಿ, ಬೇರೆ ಬೇರೆ ಎಲ್ಲ ಮಂತ್ರಿಗಳೂ ಕೂಡ ಇದ್ದರು. ನಾವು ಕಲ್ಕತ್ತಾಗೆ ಕೂಡ ಹೋಗಿದ್ದೇವು. Sunderban Board ಯಾವ ರೀತಿಯಾಗಿ ಕೆಲಸ ಮಾಡುತ್ತಿದೆ, ಉತ್ತರ ಪ್ರದೇಶದಲ್ಲಿ Nainital Board, ನಂತರ ಮಹರಾಷ್ಟ್ರದಲ್ಲಿ ವಿಧರ್ಭದಲ್ಲಿ ಮಾಡತಕ್ಕಂಥದ್ದು, ಆಂಧ್ರಪ್ರದೇಶಕ್ಕೆ ಹೋಗಿ ತೆಲಂಗಾಣ, ಆ Board ಗೆ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಹೆಚ್ಚಿನ ಹಣ ಅಂದರೆ ಸುಮಾರು 100 ಕೋಟಿ ರೂಪಾಯಿಗಳನ್ನು ಕೊಟ್ಟರು. ಅದಕ್ಕೆ ನಾವು ಎಲ್ಲಾ ಕಡೆ ಹೋಗಿ ಸಮಗ್ರವಾಗಿ ಸಂಗ್ರಹ ಮಾಡಿ ಆವಾಗ ನಮ್ಮ ಪ್ರತಿನಿಧಿಗಳು C.M.Stephen ರವರು ಕೇಂದ್ರದ ಮಂತ್ರಿಗಳಾಗಿದ್ದರು. ನಾನು Planning Commission ನ ಎಲ್ಲಾ ಸದಸ್ಯರನ್ನು ಭೇಟಿ ಮಾಡಿದ್ದೆ. Planning Commission ನಲ್ಲಿ ಯಾವುದಾದರು State ನಲ್ಲಿ regional imbalance ಇದ್ದರೆ there is a provision. ಅದಕ್ಕೆ ಹೆಚ್ಚಿನ Weightage ಕೊಡಬೇಕೆಂದು ಅದರಲ್ಲಿಯೂ ಕೂಡ ನಮೂದಿಸಿದ್ದಾರೆ. ಇವೆಲ್ಲವನು ನೋಡಿ ಸಮಗ್ರವಾದಂಥ ಒಂದು report ಸರ್ಕಾರಕ್ಕೆ ಅವಾಗ ಕೊಟ್ಟಿದ್ದೆವು. ಅವಾಗ ಏನು ಹೇಳಿದ್ದೆವು ಎಂದರೆ, 31 ಕೋಟಿ ರೂ 10 ವರ್ಷಗಳಲ್ಲಿ ನಾವೇನು ಇವತ್ತು ನಮ್ಮ ಜಿಲ್ಲೆಗೆ ಇರತಕ್ಕಂಥ ಏನೊಂದು ನಮ್ಮ ಬಜೆಟ್ ಇದೆ ಅದರ ಅತಿರಿಕ್ತವಾಗಿ ಹಣ ಖರ್ಚು ಮಾಡಬೇಕೆಂದು that was the report we have submitted in 1981. ಆಗ Gundu Rao was the Chief Minister. ಅದಕ್ಕೆ Political will ಬೇಕು. ಬಹಳ ದಿವಸಗಳಿಂದ this was the cry from the beginning. ಆದರೆ, ಗುಂಡೂರಾವ್ ಕಾಲದಲ್ಲಿ ಇದಕ್ಕೆ ಅಸ್ತಿತ್ವದಲ್ಲಿ ತರತಕ್ಕಂಥ ರೀತಿಯಲ್ಲಿ ಮಾಡಿದರು. ನಂತರ ನಿರಂತರವಾಗಿ ಬೊಮ್ಮಾಯಿಯವರು ಬಂದರು, ವೀರೇಂದ್ರ ಪಾಟೀಲ್‌ರು ಬಂದರು, ಬಂಗಾರಪ್ಪನವರ ಕಾಲದಲ್ಲಿ ಹೆಚ್ಚಿನ

ಹಣ ಕೂಡ ಬಂತು ಮತ್ತು ಅದಕ್ಕೆ dilute ಆಯ್ತು. ಹೇಗೆಂದರೆ ಇದಕ್ಕೆ ಮಲೆನಾಡು ಬೋರ್ಡ್, ಇನ್ನಿತರ ಬೋರ್ಡ್ ಎಲ್ಲಾ ಕಡೆಗೆ ಕೂಡ ಆಯಿತು. ಇವತ್ತು ಹೈದರಬಾದ್ ಪ್ರದೇಶದಿಂದ ಬಂದಂತ ನಮ್ಮ ಪ್ರದೇಶ ಏನು ಅಭಿವೃದ್ಧಿ ಆಗಿಲ್ಲ, ವಿಶಾಲ ಕರ್ನಾಟಕದಲ್ಲಿ ಬಂದ ಮೇಲೆ ನಮ್ಮ ಸಾಮಾಜಿಕ ಆರ್ಥಿಕ ಬೇರೆ ಕೆಲಸ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ಸಿಗಬೇಕು. ಇದು ನಮ್ಮ ಅನಿಸಿಕೆ ಮತ್ತು ಇದನ್ನು ನಾವು ಕೇಳಿದ್ದೇವೆ. ಇವತ್ತು ಕೇಳತಕ್ಕಂಥದ್ದು ಏನೇಂದರೆ ಸಮಸ್ತ ಬೀದರ್‌ನಿಂದ ಬೆಳಗಾಂವರೆಗೆ ಉತ್ತರ ಕರ್ನಾಟಕ ಭಾಗದ ಸರ್ವಾಂಗೀಣ ಅಭಿವೃದ್ಧಿಯಾಗಬೇಕು. ನಂಜುಡಪ್ಪನವರಂತಹ ಆರ್ಥಿಕ ತಜ್ಞರ ಅಧ್ಯಕ್ಷತೆಯಲ್ಲಿ ಆಗಿನ ಎಸ್.ಎಂ. ಕೃಷ್ಣರವರ ಸರ್ಕಾರ ಒಂದು ಸಮಿತಿ ಮಾಡಿದರು ನಾವು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಆ ಸಮಿತಿ ಬಹಳ ಶೀಘ್ರವಾಗಿ ಬೀದರ್‌ನಿಂದ ಬೆಳಗಾಂವರೆಗೆ ಇರತಕ್ಕಂಥ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ ಏನೇನು ಆಗಬೇಕೆಂಬ ಬಗ್ಗೆ ನಂಜುಂಡಪ್ಪ ವರದಿಯಲ್ಲಿ ಕೋಟ್ಟಿದ್ದಾರೆ. ಯಾವ ಸರ್ಕಾರದಲ್ಲಿ ನಂಜುಂಡಪ್ಪನವರ Committee Constitute ಆಯಿತು, ಅದೇ ಸರ್ಕಾರ ಎಸ್.ಎಂ. ಕೃಷ್ಣರವರ ಕಾಲದಲ್ಲಿ 3 ವಿಚಾರಗಳನ್ನು ಅಸ್ತಿತ್ವಕ್ಕೆ ತರತಕ್ಕಂಥದ್ದಕ್ಕೆ ಮಾಡಿದ್ದೇವೆ. ಪಶು ವಿಶ್ವ ವಿದ್ಯಾನಿಲಯವನ್ನು ಬೀದರ್‌ನಲ್ಲಿ ಮಾಡಿದ್ದೇವೆ. ನಂಜುಂಡಪ್ಪನವರು ಗಡಿ ಭಾಗದಲ್ಲಿ ಪಶು ವಿಶ್ವವಿದ್ಯಾನಿಲಯ ಮಾಡಬೇಕೆಂದು ಹೇಳಿದ್ದರು. ಅದಾಯಿತು ಅದರ ಉದ್ಘಾಟನೆ ಆಯಿತು. ಕೆಲಸಕಾರ್ಯಗಳು ಕೂಡ ನಡೆಯುತ್ತಿವೆ. ಉತ್ತರ ಕರ್ನಾಟಕ ಭಾಗದ ಹಿಂದುಳಿದ ಪ್ರದೇಶವಾದ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಆಗಬೇಕೆನ್ನುವ ರೀತಿಯಲ್ಲಿ, ಈ ಬಗ್ಗೆ ಸಂಪುಟದಲ್ಲಿ ಬಹಳಷ್ಟು ಚರ್ಚೆಯಾಯಿತು. ನೀವು ಮಹಿಳಾ ವಿಶ್ವ ವಿದ್ಯಾನಿಲಯವನ್ನು ಬಿಜಾಪುರದಲ್ಲಿ ಮಾಡಿದ್ದಾರೆ ಇಲ್ಲಿಯ ಜನ ಹೀಗೆ ಹೋಗಬೇಕೆಂದು ಕೇಳಿದ್ದರು. ಅದಕ್ಕೆ ಅಲ್ಲಿಯ ಜನ ಇಲ್ಲಿಗೆ ಹೇಗೆ ಬರಬೇಕೆಂದು ನಾನು ಕೇಳಿದೆ. ಇವೆಲ್ಲವನ್ನು ಕೂಡ ಚರ್ಚೆ ಮಾಡಿ ಕೊನೆಗೆ ಮಹಿಳಾ ವಿಶ್ವ ವಿದ್ಯಾನಿಲಯವಾಯಿತು. ಇನ್ನು ಹುಬ್ಬಳಿಯಲ್ಲಿ ಹನಿ ನೀರು ನಿಗಮ.

ಶ್ರೀ ಬಿ.ಎಸ್.ಹೊರಟ್ಟಿ: ಮಹಿಳಾ ವಿಶ್ವ ವಿದ್ಯಾನಿಲಯ ರಾಜ್ಯದು ಅಲ್ಲ. ಅದು ಕೇವಲ ಎರಡು division ನದು.

ಶ್ರೀ ಧರ್ಮಸಿಂಗ್: ಅದು ರಾಜ್ಯದು ಅಲ್ಲ ಎಂದರೆ ನೀವು ಅಧಿಕಾರಕ್ಕೆ ಬಂದ ಮೇಲೆ ಆ ರೀತಿ ಮಾಡಿರುವುದು .

ಶ್ರೀ ಬಿ.ಎಸ್.ಹೊರಟ್ಟಿ: ದಯಮಾಡಿ ತಪ್ಪು ಮಾಹಿತಿ ಹೋಗಬಾರದು.

ಶ್ರೀ ಧರ್ಮಸಿಂಗ್: ನಾನು ಈಗ ಹೇಳಿ ಮುಗಿಸಿದ ಮೇಲೆ ನಂತರ ನೀವು ಉತ್ತರ ಕೊಡಿ. ಈಗ ನಿಮಗೆ ಸಂಬಂಧವಿಲ್ಲ. What is the philosophy behind that I am telling through this House. 1947ರಲ್ಲಿ ರಾಜಕಾರಣ ಮಾಡತಕ್ಕಂತ ನಾವೆಲ್ಲರೂ ಕೂಡ ವಿಶಾಲ ಮನೋಭಾವನೆಯಿಂದ ಈ ರಾಜ್ಯದ ಎಲ್ಲಾ ಕಡೆ ಅಭಿವೃದ್ಧಿಯಾಗಬೇಕೆನ್ನುವ ದೃಷ್ಟಿಯಿಂದ ಆಡಳಿತ ನಡೆಸತಕ್ಕಂಥದ್ದು ಇದೆ. ನಂಜುಂಡಪ್ಪ ವರದಿ ಬಗ್ಗೆ ಬೆಳಗಾಂನಲ್ಲಿ ಅಧಿವೇಶನ, ನಂಜುಂಡಪ್ಪ ವರದಿಯ ಅನುಷ್ಠಾನಕ್ಕೆ 1000 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ, ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಹಣ ಕೊಡುತ್ತೇವೆಂದು ಹೇಳಿದರು, ಇಲ್ಲಿ ಸದನ ನಡೆಯುತ್ತಿದೆ, ರಾಜ್ಯದ ಉಪಮುಖ್ಯಮಂತ್ರಿಗಳು ವಿಕಾಸಯಾತ್ರೆಯಲ್ಲಿ ಹೋಗಿ ಗುಲಬರ್ಗಾದಲ್ಲಿ ಇನ್ನೂ ಕೂಡ 32 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದರು, ಆವಾಗ ಶ್ರೀರಾಮ ರೆಡ್ಡಿಯವರು ಕೇಳಿದರು, ಸದನ ನಡೆಯುತ್ತಿದೆ ಹೊರಗಡೆ ಹೋಗಿ ಘೋಷಣೆ ಮಾಡತಕ್ಕಂಥದ್ದು ಕೂಡ ಸರ್ಕಾರದಲ್ಲಿ ನಡೆದಿದೆ. ಆ ದಿವಸ ಮಾನ್ಯ ಪ್ರಕಾಶ್‌ರವರು ರಾಜ್ಯದ ಗೃಹಮಂತ್ರಿಯಾಗಿ ಅಲ್ಲ, ಆ ಪ್ರದೇಶದ ಶಾಸಕಾರಾಗಿ ನಮ್ಮ ಭಾಗದ ಅಭಿವೃದ್ಧಿಗೆ ಸರಿಯಾದ ರೀತಿಯಲ್ಲಿ ಹಣ ಬಿಡುಗಡೆ ಮಾಡಿಲ್ಲವೆಂದು ಅವರು ಕೂಡ ಹೇಳಿದ್ದಾರೆ. ಇದನ್ನು ನಾನು ಮತ್ತು ಖರ್ಗೆಯವರು ಕೂಡ ಹೇಳಿದ್ದೇವೆ. ವೀರಬಸಂತರೆಡ್ಡಿಯವರು ಹೇಳಿದ್ದಾರೆ, ಶರಣಪ್ರಕಾಶ್ ಪಾಟೀಲ್ ಹೇಳಿದ್ದಾರೆ. ಬಿ.ಆರ್.ಪಾಟೀಲರು ಮತ್ತು ನಮ್ಮ ವೈಜನಾಥ್ ಪಾಟೀಲರು ಇದರ ಬಗ್ಗೆ ಹೇಳಿದ್ದಾರೆ. ವೈಜನಾಥ್ ಪಾಟೀಲರಿಗೆ ನಾವು 371 ಎಂದು ಹೆಸರಿಟ್ಟಿದ್ದೇವೆ. ಬಹಳಷ್ಟು ಬದಲಾವಣೆ ಆಗಬೇಕೆನ್ನುವ ರೀತಿಯಲ್ಲಿ ಹೋರಾಟ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಇವತ್ತಿನ ದಿವಸ ಮಾನ್ಯ ಬಿ.ಆರ್.ಪಾಟೀಲರ ಆಗ್ರಹದ ಮೇರೆಗೆ ನಾವು ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ನಿಯಮ 69 ರ ಕೆಳಗಡೆ ಚರ್ಚೆ ಮಾಡುವುದಕ್ಕೆ ತಾವು

ಅವಕಾಶ ಮಾಡಿಕೊಟ್ಟಿದ್ದೀರಿ. ನಾವು 1571 ಕೋಟಿ ರೂಗಳನ್ನು ನಂಜುಂಡಪ್ಪ ವರದಿ ಜಾರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಇವತ್ತು ಬೇರೆ ಬೇರೆ ಇಲಾಖೆಯಲ್ಲಿ ಕಡಿತ ಮಾಡಿ ಕೊಡತಕ್ಕಂಥದ್ದು ಸರಿಯಲ್ಲ. ಹೆಚ್ಚುವರಿ ಹಣ ಕೊಡಬೇಕಾಗಿದೆ. 1571 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡತಕ್ಕಂಥದ್ದನ್ನು ಪದೇ ಪದೇ ಯಡಿಯೂರಪ್ಪನವರು ಆಶ್ವಾಸನೆ ಕೊಡುತ್ತಿದ್ದಾರೆ. ರಾಜ್ಯದ ಜನತೆಗೆ, ಆ ಪ್ರದೇಶದ ಜನತೆಗೆ ಯಡಿಯೂರಪ್ಪನವರು ಹೇಳಬೇಕು, ಇಲ್ಲಿಯವರೆಗೆ ನಂಜುಂಡಪ್ಪನವರ ವರದಿ ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ಆ ಭಾಗದ ಅಭಿವೃದ್ಧಿಗೋಸ್ಕರ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಯಾವ ratio ದಲ್ಲಿ ಬಿಡುಗಡೆ ಮಾಡುತ್ತೀರಿ? ಇವತ್ತು 50 ಇದೆ, 25 ಇದೆ, 30 ಇದೆ, ಎಲ್ಲೂ ಕೂಡ ಇಲ್ಲವೇ ಇಲ್ಲ. ಸುಮ್ಮನೆ ಹೇಳುತ್ತಾರೆ. ಸಾಲ ಮನ್ನಾದ 2300 ಕೋಟಿ ರೂಪಾಯಿಗಳನ್ನು ಭರಿಸಬೇಕಾಗಿದೆ. ನಿನ್ನೆ ಕೂಡ ಅಂದಾಜು ಪೂರಕ ಬೇಡಿಕೆಯಲ್ಲಿ ಕೇಳಿದರು. ಇವತ್ತು ನಾವು ರಾಜ್ಯದ ವಿಕಾಶಕ್ಕೋಸ್ಕರ ಹಣ ಕೇಳುತ್ತೇವೆಂದು ಹೇಳುತ್ತಾರೆ. ಎಲ್ಲಿಂದ ಹಣ ಕೇಳುತ್ತೀರಿ? ಇವತ್ತು ಬಂಜಾರ Community ಯ dress ಅನ್ನು ಅವರು (ಯಡಿಯೂರಪ್ಪನವರು) ಹಾಕಿಕೊಂಡರು. ಎಲ್ಲಾ ಕಡೆಗೆ ಹೋದರು. ಬಂಜಾರ ಅಭಿವೃದ್ಧಿ ಯಾವ ಕಾಲದಲ್ಲೂ ಆಗಲಿಲ್ಲ. ನನ್ನ ಕಾಲದಲ್ಲಿ ಆಗುತ್ತಿದೆ ಎಂದು ಹೇಳಿದರು. ಎಷ್ಟು ಇಟ್ಟಿದ್ದೀರಿ ಸ್ವಾಮಿ? 14 ಕೋಟಿ ರೂಪಾಯಿಗಳನ್ನು ಇಟ್ಟರೆ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಡಾ: ರಾಜಕುಮಾರ್‌ರವರು ನಮ್ಮ ಕನ್ನಡ ನಾಡಿಗೆ, ಕನ್ನಡ ಜನತೆಗೆ ಸ್ವಾಭಿಮಾನ ಕೊಡತಕ್ಕಂಥ ರೀತಿಯಲ್ಲಿ ಅವರ ಜೀವನ ಕಾಲದಲ್ಲಿ ಏನು ಕೆಲಸ ಮಾಡಿದ್ದಾರೆ, ಕೊನೆಯದಾಗಿ ಅವರ ಸ್ಮಾರಕಕ್ಕೆ ಕೇವಲ 3 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಹಾಗಾಗಿ ಇವುಗಳ ಬಗ್ಗೆ ಎಲ್ಲಾ ಬಹಳಷ್ಟು ಚರ್ಚೆ ಮಾಡುವವರಿದ್ದಾರೆ. ನಾನು ಪ್ರಾಸ್ತಾವಿಕವಾಗಿ, ಪ್ರಾರಂಭಿಕವಾಗಿ ಇವತ್ತು ಆ ಭಾಗದ ಜನರಿಗೆ ಏನು ಅನ್ಯಾಯವಾಗಿದೆ ಎಂದು ಹೇಳುತ್ತಿದ್ದೇನೆ. ಇವತ್ತಿನ ಸರ್ಕಾರ ಕೇವಲ ಘೋಷಣೆ ಮಾಡುತ್ತಿದೆ. ಮೂಗಿಗೆ ತುಪ್ಪ ಹಾಕುತ್ತಾರಲ್ಲಾ? ಕೊಟ್ಟಿದ್ದೇವೆಂದು ಹೇಳುತ್ತಾರಲ್ಲ? ಎಲ್ಲಿ ಕೊಟ್ಟಿದ್ದೀರಿ ಅದನ್ನು ಹೇಳಬೇಕಲ್ಲವೇ? ಎಷ್ಟು ಹಣವನ್ನು ಯಾವ ಬಾಬತ್ತಿಗೆ ಕೊಟ್ಟಿದ್ದೀರಿ? ಇವತ್ತು irrigation ಗೆ ನಾನು ಮುಖ್ಯಂತ್ರಿಯಾಗಿದ್ದಾಗ ನಾವು

ಮತ್ತು ಖರ್ಗೆಯವರು have taken a decision. ಕೃಷ್ಣಾ ಜಲ ನಿಗಮದಲ್ಲಿ Incomplete project ಅನ್ನು complete ಮಾಡತಕ್ಕಂಥ ರೀತಿಯಲ್ಲಿ ಕಾರಂಜಾ ನಮ್ಮ ಕಾಲದಲ್ಲಿ complete ಆಗಿದೆ. 1972ರಲ್ಲಿ ಪ್ರಾರಂಭವಾದಂಥ ಕಾರಂಜಾ ಯೋಜನೆಗೆ 9 ಕೋಟಿ ರೂ.ಯಿಂದ ಪ್ರಾರಂಭವಾಗಿ, ಈಗ 477 ಕೋಟಿ ರೂ.ಗಳಾಗಿದೆ. ಬೆಣ್ಣೆತೊರಾ ಯೋಜನೆಯನ್ನು ದೇವರಾಜ್ ಅರಸರವರು start ಮಾಡಿದ್ದರು. ಇವತ್ತು ಮುಖ್ಯಮಂತ್ರಿಗಳು ಬಂದು ಉದ್ಘಾಟನೆ ಮಾಡಿದ್ದಾರೆ. ಎಸ್.ಎಂ. ಕೃಷ್ಣರವರ ಕಾಲದಲ್ಲಿ ನೀರಾವರಿಗೆ 3,024 ಕೋಟಿ ರೂ ಇದ್ದರೆ, ನಮ್ಮ ಕಾಲದಲ್ಲಿ ಹೆಚ್ಚು ಮಾಡಿ 3924 ಕೋಟಿ ರೂ ಕೊಟ್ಟಿದ್ದೇವೆ. We have increased to 29% for crore sector i.e., irrigation. ಆದರೆ, ತಾವು 17% ಕೊಟ್ಟಿದ್ದೀರಿ. ಆ ಭಾಗದ ಅಭಿವೃದ್ಧಿಗೆ ಹೇಗಾಗ ಬೇಕು? 17% ಕೊಟ್ಟರೆ ಆಗುತ್ತದೆಯೇ? ನೀರಾವರಿಗೆ ಹೆಚ್ಚಿನ ಆದ್ಯತೆ ಏನದೆ? ಇವತ್ತು ಕೈಗೆ ಸಿಕ್ಕಿದೆ ಎಂದು ಹೇಳಿ ಶಿಕಾರಿಪುರಕ್ಕೆ, ಬೇರೆ ಬೇರೆ ಪಟ್ಟಣಗಳಿಗೆ ದುಡ್ಡು ಕೊಡುವ ರೀತಿಯಲ್ಲಾಗಿದೆ. ಬೇರೆ ಪಟ್ಟಣಗಳು ಇಲ್ಲವೇ? Discontenment ಯಾವಾಗಲೂ ಕೂಡ democracy set up ನಲ್ಲಿ ಬೆಳೆಯಲ್ಲಿಕ್ಕೆ ಅವಕಾಶ ಕೊಡಬಾರದು. ಇದೇ ರೀತಿಯಾಗಿ ಇವತ್ತು ಸಾಕಷ್ಟು ಎಲ್ಲಾ ಕಡೆಗೆ ಕೂಡ ಒಂದು revolution ಆಗಿದೆ. ತಮಗೆ ಗುರುತಿಲ್ಲ. ಶ್ರೀರಾಮರೆಡ್ಡಿಯವರಿಗೆ ಗುರುತಾಗಿರಬಹುದು. ಚೆನ್ನಾರೆಡ್ಡಿಯವರು 1968ರಲ್ಲಿ ತೆಲಾಂಗಣಕ್ಕೆ ಆದಂಥ ಅನ್ಯಾಯದ ಬಗ್ಗೆ ಸತತವಾಗಿ 6 ತಿಂಗಳ ಕಾಲ he was a very fiery speaker ಆಗಿದ್ದರು. 1971ರಲ್ಲಿ ಆಗ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲವಿತ್ತು. ಆಗಲೂ ಕೂಡ ತೆಲಾಂಗಣ ಪ್ರಜಾ ಸಮಿತಿಯಿಂದ 14 ಜನ ಆರಿಸಿ ಹೋಗಿದ್ದರು. ಅದಕ್ಕೆ discontenment ಇವತ್ತು ನಡೆಯುತ್ತದೆಂದು ಹೇಳಿ ನಡೆಸಿಕೊಂಡು ಹೋಗಬಾರದು. ಮಾಡಬೇಕಾದರೆ, ಮನಃಪೂರ್ವಕವಾಗಿ ಮಾಡಿ. ನಿಮ್ಮಲ್ಲಿ ಮನಸ್ಸಿದ್ದರೆ, political will ಇದ್ದರೆ, commitment ಇದ್ದರೆ ಹಣ ಕೊಡಿ. ಒಂದು ವಿಶ್ವಾಸವನ್ನಾದರೂ ಕೊಡಿ. ತಮ್ಮ ಹಿಂದೆ ಇವತ್ತು ಜನ ಬರುತ್ತಾರೆ. ಇಂಥ ಒಂದು ಸಂದರ್ಭದಲ್ಲಿ, ಇವತ್ತಿನ ದಿವಸ ಹಣ ಬಿಡುಗಡೆ ಮಾಡುತ್ತಿಲ್ಲ. ಬಜೆಟ್‌ನಲ್ಲಿ ಎಲ್ಲ ಕಡೆಗೆ ಹೇಳಿದ್ದಾರೆ. ನಾವು ಇಷ್ಟು ಹಣ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಯಾವ ಬಾಬತ್ತಿಗೂ ಕೂಡ ಮಾಡಿಲ್ಲ. ಕಬ್ಬು ಬೆಳೆಗಾರರಿಗೆ ಎಲ್ಲಿ ಕೊಟ್ಟಿದ್ದೀರಿ? ನಮ್ಮಲ್ಲಿ Upper Krishna ದಲ್ಲಿ

3 ಲಕ್ಷ ಟನ್ ಬೆಳೆಯತಕ್ಕಂಥ ರೀತಿಯಲ್ಲಿ ಜೇವರ್ಗಿಯಲ್ಲಿ ಪ್ರಾರಂಭವಾಯಿತು. ಎಲ್ಲ ಕಡೆಗೆ ಹೊಲಗಳಿಗೆ ಅವರು ಬೆಂಕಿ ಹಚ್ಚಿದ್ದಾರೆ. ರೈತರಿಗೆ ಗೊತ್ತಾಗಿದೆ. They have come to the conclusion that ಈ ಸರ್ಕಾರ ನಮ್ಮ ನೆರವಿಗೆ ಬರುವುದಿಲ್ಲ. ಕಬ್ಬು ಬೆಳೆಗಾರರಿಗೆ ಇವರು ಹೆಚ್ಚಿನ ಬೆಲೆ ಕೊಡುವುದಿಲ್ಲ. ಮುಖ್ಯಮಂತ್ರಿಯವರು ಸಮಾಲೋಚನಾ ಸಭೆಯಲ್ಲಿ ಮಾತನಾಡಿದಾಗ ಮಹಾರಾಷ್ಟ್ರ ಮಾದರಿಯಲ್ಲಿ ಕೂಡ ಮಾಡಿ ಎಂದು ನಾವೊಂದು ಸಲ ಹೇಳಿದೆವು. ಯಾವುದು ಕೂಡ ಮಾಡುತ್ತಿಲ್ಲ. ಇವತ್ತು ನಾವು ನೊಂದ ಮನಸ್ಸಿನಿಂದ ಹೇಳುತ್ತಿದ್ದೇವೆ. ಇವತ್ತು ಈ ಚರ್ಚೆಗೆ ಬಹಳಷ್ಟು ನಮ್ಮ ಯುವ ಶಾಸಕರು ಬೆಳಕು ಚೆಲ್ಲಿದ್ದಾರೆ. ಹೆಚ್ಚಿನ ಕಾಲವಕಾಶವನ್ನು ನಾನು ತೆಗೆದುಕೊಳ್ಳುವುದಿಲ್ಲ. ಒಟ್ಟಾರೆ ಹೇಳಬೇಕಾದರೆ, ಉಪಮುಖ್ಯಮಂತ್ರಿಗಳಾಗಿ ಮತ್ತು ಹಣಕಾಸು ಮಂತ್ರಿಗಳಾಗಿ ಇವತ್ತು ಯಡಿಯೂರಪ್ಪನವರು ರಾಜ್ಯದ ಜನತೆಗೆ ವಿಶೇಷವಾಗಿ ಹೈದರಾಬಾದ್- ಕರ್ನಾಟಕದಲ್ಲಿರುವ ಜನರಿಗೆ ಬೀದರ್‌ನಿಂದ ಬಳ್ಳಾರಿವರೆಗೆ ಇರುವ ಜನರಿಗೆ ವಂಚನೆ ಮಾಡುತ್ತಿದ್ದಾರೆ. ಸುಮ್ಮನೆ ಇವತ್ತಿನ ದಿವಸ ಆಶ್ವಾಸನೆ ಹೇಳುತ್ತಿದ್ದಾರೆ. ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರತಕ್ಕಂಥ ರೀತಿಯಲ್ಲಿ ಇವರ ತಾರತಮ್ಯವಿದೆ ಎಂದು ನಾವು ಆರೋಪ ಮಾಡುತ್ತಿದ್ದೇವೆ. ಮತ್ತೆ, ಮುಂದಿನ ಚರ್ಚೆಯಲ್ಲಿ ನಮ್ಮೆಲ್ಲ ಶಾಸಕರು ಕೂಡ ಪಾಲ್ಗೊಳ್ಳುತ್ತಾರೆ.

ಉಪಾಧ್ಯಕ್ಷರು: ಬಿ.ಆರ್. ಪಾಟೀಲ್‌ರವರೆ, ಮಾತನಾಡಿ. 10–10 ನಿಮಿಷ ಮಾತನಾಡಿ.

ಬಿ.ಆರ್. ಪಾಟೀಲ್ (ಆಳಂದ): ಮಾನ್ಯ ಉಪಾಧ್ಯಕ್ಷರೆ, ನಮ್ಮ ನಾಯಕರು ಪ್ರಾಸ್ತಾವಿಕವಾಗಿ ಮಾತನಾಡಿದ್ದಾರೆ. ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡುತ್ತೇವೆಂಬ ಘೋಷಣೆ ಕೇಳಿದ ಮೇಲೆ ನಮ್ಮ ಉತ್ತರ ಕರ್ನಾಟಕದ ವಿಶೇಷವಾಗಿ ಹಿಂದುಳಿದ ಪ್ರದೇಶಗಳ ಜನರಿಗೆ ಬಹಳ ಖುಷಿಯಾಯಿತು. ಈ ಸರ್ಕಾರ ನಮ್ಮ ಕಷ್ಟಕ್ಕೆ ಬರುತ್ತಿದೆ. ನಮಗೆ ಸಾಕಷ್ಟು ಹಣ ಕೊಟ್ಟು ಸಮಾನತೆ ತರುವ ಪ್ರಯತ್ನ ಮಾಡುತ್ತಿದೆ ಎಂಬ ನಂಬಿಕೆ ಮತ್ತು ವಿಶ್ವಾಸ ಎಲ್ಲಾ ಭಾಗದ ಜನರಿಗೆ ಬಂದಿತ್ತು. ನಂಜುಂಡಪ್ಪನವರು ಬಹಳ ವೈಜ್ಞಾನಿಕವಾದ ಅಧ್ಯಯನ ಮಾಡಿದ್ದಾರೆ ಮತ್ತು ಇದಕ್ಕೊಂದು

ಶಾಶ್ವತವಾದಂಥ ಪರಿಹಾರವನ್ನು ಕಂಡು ಹಿಡಿದು ಎಲ್ಲಿ ಸಮತೋಲನವಿಲ್ಲ, ಎಲ್ಲಿ ಹಿಂದುಳಿದ ಪ್ರದೇಶವಿದೆ, ಅದಕ್ಕೆ ಏನೆಲ್ಲ ಸೌಲಭ್ಯಗಳನ್ನು, ಸೌಕರ್ಯಗಳನ್ನು, ಅನುದಾನವನ್ನು ಕೊಟ್ಟು ರಾಜ್ಯದ ಇತರೆ ತಾಲ್ಲೂಕುಗಳಿಗೆ ಸಮಾನಾಂತರವಾಗಿ ಮೇಲೆತ್ತಬೇಕೆನ್ನುವಂಥದ್ದರ ಬಗ್ಗೆ ಬಹಳ ವೈಜ್ಞಾನಿಕವಾಗಿ ಮಾಡಿದ ಅಧ್ಯಯನದ ವರದಿಯನ್ನು ಮಾನ್ಯ ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿ ಸರ್ಕಾರಕ್ಕೆ ಕೊಟ್ಟ ಮೇಲೆ ಸರ್ಕಾರದವರು ಅದನ್ನು ಅನುಷ್ಠಾನ ಮಾಡುತ್ತೇವೆಂದು ಘೋಷಣೆ ಮಾಡಿ ಅದಕ್ಕೆ 1571 ಕೋಟಿ ರೂಪಾಯಿಗಳನ್ನು ಕೂಡ ಕೊಡುತ್ತೇವೆನ್ನುವಂಥ ಮಾತನ್ನು ಕೂಡ ಹೇಳಿದ್ದಾರೆ, ನಾವು ಬಹಳ ಮೂಲಭೂತವಾಗಿ ನೋಡಬೇಕಾದಂಥ ಪ್ರಶ್ನೆ ಎಂದರೆ, ಇಲ್ಲಿ ನಮ್ಮ ಆತಂಕ ಏನೆಂದರೆ, ನಂಜುಂಡಪ್ಪ ವರದಿಯಲ್ಲಿ ಶಿಫಾರಸ್ಸು ಏನು ಹೇಳಿತ್ತದೆಂದರೆ, ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಶೇ. 60ರಷ್ಟು ಅನುದಾನ ಕೊಡಬೇಕೆಂದು ಹೇಳುತ್ತಾರೆ. ಅತಿ ಹಿಂದುಳಿದ ತಾಲ್ಲೂಕುಗಳಿಗೆ ಶೇ.24ರಷ್ಟು ಮತ್ತು ಹಿಂದುಳಿದ ತಾಲ್ಲೂಕುಗಳಿಗೆ ಶೇ.16ರಷ್ಟು ಅನುದಾನ ಕೊಡಬೇಕೆಂದು ಹೇಳುತ್ತಾರೆ. ಆದರೆ, ಸರ್ಕಾರ ಆದೇಶ ಹೊರಡಿಸುವಾಗ, ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ 50, ಅತಿ ಹಿಂದುಳಿದ ತಾಲ್ಲೂಕುಗಳಿಗೆ 30, ಹಿಂದುಳಿದ ತಾಲ್ಲೂಕುಗಳಿಗೆ 20 ಈ ಅನುಪಾತದ ಮೇಲೆ ಒಂದು ನಿರ್ಧಾರ ಮಾಡಿ ಹಣವನ್ನು ಹಂಚುವಂಥ ಕೆಲಸ ಪ್ರಾರಂಭ ಮಾಡಿದ್ದಾರೆ. ನನಗೆ ಇವತ್ತೂ ಅರ್ಥವಾಗುತ್ತಿಲ್ಲ. ನಂಜುಂಡಪ್ಪ ವರದಿಯನ್ನು ಯಥಾವತ್ತಾಗಿ ನಾವು ಒಪ್ಪುತ್ತೇವೆ, ಅನುಷ್ಠಾನಗೊಳಿಸುತ್ತೇವೆಂದು ಹೇಳಿತ್ತಿದ್ದ ಸರ್ಕಾರ, ನಂಜುಂಡಪ್ಪ ವರದಿಯ ಶಿಫಾರಸ್ಸನ್ನು ಬದಿಗೊತ್ತಿ, ಅತ್ಯಂತ ಹಿಂದುಳಿದ ಪ್ರದೇಶಕ್ಕೆ 60 ಕೊಡುವ ಬದಲು 50, ಅತಿ ಹಿಂದುಳಿದ ತಾಲ್ಲೂಕುಗಳಿಗೆ 24 ಕೊಡುವ ಶಿಫಾರಸ್ಸನ್ನು ಬಿಟ್ಟು 30 ಮಾಡಿ, ಹಿಂದುಳಿದ ತಾಲ್ಲೂಕುಗಳಿಗೆ ಕೇವಲ 16% ಅನುದಾನ ಕೊಡಬೇಕೆನ್ನುವುದಕ್ಕೆ ಅದನ್ನು ಹೆಚ್ಚಿಸಿ, 20% ಅನುದಾನವನ್ನು ಕೊಟ್ಟರು. ಸಂಪೂರ್ಣವಾಗಿ ಸೂತ್ರವನ್ನು ಕೈಬಿಟ್ಟು ಈ ಸರ್ಕಾರ ತನ್ನದೇ ಆದ ಸೂತ್ರದ ಆಧಾರದ ಮೇಲೆ ಹಣಕಾಸನ್ನು ಹಂಚ ಬೇಕೆಂದು ಆದೇಶ ಹೊರಡಿಸಿತು. ಏಕೆ ಮಾಡಿದರು? ಆ ಪ್ರಶ್ನೆಯನ್ನು ಇಲ್ಲಿ ಮುಖ್ಯವಾಗಿ ಚರ್ಚೆ ಮಾಡಬೇಕಾಗುತ್ತದೆ. ಅಂದರೆ, ನಂಜುಂಡಪ್ಪನವರ

ಶಿಫಾರಸ್ಸನ್ನು ನೀವು ತಿರಸ್ಕಾರ ಮಾಡಿದ ಹಾಗಾಯಿತು ಅಥವಾ ನಂಜುಂಡಪ್ಪ ಶಿಫಾರಸ್ಸನ್ನು ತಿದ್ದುಪಡಿ ಮಾಡಿದ ಹಾಗಾಯಿತು ಅಥವಾ ನಂಜುಂಡಪ್ಪ ಶಿಫಾರಸ್ಸನ್ನು ನೀವು ಒಪ್ಪಲಿಲ್ಲ, ನಿಮ್ಮದೇ ಆದಂತಹ ಸೂತ್ರದ ಆಧಾರದ ಮೇಲೆ ನೀವು ಅನುದಾನವನ್ನು ಹಂಚಿಕೆ ಮಾಡುತ್ತೀರಿ ಎನ್ನುವ ಅರ್ಥದಲ್ಲಿ ನೀವು ಆದೇಶವನ್ನು ಹೊರಡಿಸಿದ್ದೀರಿ.ಇದು ಸರಿಯಲ್ಲ. ಏಕೆಂದರೆ, ಇವತ್ತು ಇಡೀ ನಮ್ಮ ಕರ್ನಾಟಕದಲ್ಲಿರುವ 175 ತಾಲ್ಲೂಕುಗಳಲ್ಲಿ 114 ತಾಲ್ಲೂಕುಗಳು ಹಿಂದುಳಿದಿವೆ ಎಂದು ಮಾನ್ಯ ನಂಜುಂಡಪ್ಪನವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಅದರಲ್ಲಿ 59 ತಾಲ್ಲೂಕುಗಳು ನಮ್ಮ ಉತ್ತರ ಕರ್ನಾಟಕದಲ್ಲಿ ಬರುತ್ತವೆ. ಕೆವಲ 55 ತಾಲ್ಲೂಕುಗಳು ದಕ್ಷಿಣ ಕರ್ನಾಟಕದಲ್ಲಿ ಬರುತ್ತವೆ. ಇದು ಅವರು ಹೇಳಿದಂಥ ಅಂಕಿ ಸಂಖ್ಯೆಗಳು. ಅಂದರೆ ಅತ್ಯಂತ ಹೆಚ್ಚಿನ ತಾಲ್ಲೂಕುಗಳು ನಮ್ಮ ಉತ್ತರ ಕರ್ನಾಟಕದಲ್ಲಿ ಬರುತ್ತವೆ. ಅದಕ್ಕಿಂತ ಕಡಿಮೆ ತಾಲ್ಲೂಕುಗಳು ದಕ್ಷಿಣ ಕರ್ನಾಟಕದಲ್ಲಿ ಬರುತ್ತವೆ, ಇದು ನಂಜುಂಡಪ್ಪನವರು ಹೇಳಿದಂಥ ಮಾತು. ಅದರಲ್ಲಿ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ 21 ತಾಲ್ಲೂಕುಗಳು ಕೇವಲ ಹೈದರಾಬಾದ್-ಕರ್ನಾಟಕದಿಂದ ಬಂದು ಸೇರುತ್ತವೆ. ಅಂದರೆ, ಶೇ.53.85, backwardness contribution is only from the Hyderabad- Karnataka. ಅಂದರೆ, 5 ಜಿಲ್ಲೆಗಳಿಂದ 53% ಅಂದರೆ, 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 21 ತಾಲ್ಲೂಕುಗಳು ಹೈದರಾಬಾದ್-ಕರ್ನಾಟಕದಿಂದ ಬಂದು ಸೇರುತ್ತವೆ. ಆದರೆ, ಅನುದಾನವನ್ನು ನೀವು ಯಾವ ತರಹ ಹಂಚಬೇಕಾಗಿತ್ತು? ಯಾವ ಪ್ರದೇಶ ಹಿಂದುಳಿದಿದೆ, ಆ ಪ್ರದೇಶ ಹೆಚ್ಚಿನ ಅನುದಾನ ಕೊಡಬೇಕಾಗಿತ್ತು. ಯಾವ ಪ್ರದೇಶ ಮುಂದುವರೆದಿದೆ, ಆ ಪ್ರದೇಶಕ್ಕೆ ಕಡಿಮೆ ಅನುದಾನವನ್ನು ಕೊಡಬೇಕಾಗಿತ್ತು. ಆದರೆ, ಅದು ಹಾಗಾಗಲಿಲ್ಲ. ಮಾನ್ಯ ನಂಜುಂಡಪ್ಪನವರು ಏನು ಹೇಳಿದರು? Gulburga division ಗೆ 628.50 ಕೋಟಿ ರೂಪಾಯಿ ಕೊಡಬೇಕು. ಆದರೆ, ಸರ್ಕಾರ ಎಷ್ಟು ಕೊಡಬೇಕೆಂದು ಸೂತ್ರ ಹಾಕಿತೆಂದರೆ, ಕೇವಲ 499.98 ಕೋಟಿ ರೂಪಾಯಿ. ಅಂದರೆ, ಕಡಿಮೆಯಾಯಿತು. ಅದೇ ಪ್ರಕಾರ, ಬೆಂಗಳೂರು ವಿಭಾಗಕ್ಕೆ 392.87 ಕೋಟಿ ರೂಪಾಯಿ ಕೊಡಬೇಕಾಗಿದ್ದರಲ್ಲಿ ಸರ್ಕಾರ 455 ಕೋಟಿ ರೂಪಾಯಿ ಕೊಟ್ಟಿತು. ಅಂದರೆ, ಸೂತ್ರದ ಶಿಫಾರಸ್ಸಿಗಿಂತ ಬೆಂಗಳೂರಿಗೆ ಜಾಸ್ತಿ ಕೊಟ್ಟಿತು. ಆದರೆ, ಹೈದರಾಬಾದ್-

ಕರ್ನಾಟಕಕ್ಕೆ 628 ಕೊಡಬೇಕೆನ್ನುವ ಶಿಫಾರಸ್ಸನ್ನು ಬದಿಗೊತ್ತಿ ಕೇವಲ 499.98 ಕೋಟಿ ರೂ. ಕೊಟ್ಟರು. ಅಂದರೆ ಕಡಿಮೆಯಾಯಿತು. ಅದೇ ಪ್ರಕಾರ, ಮೈಸೂರು ವಿಭಾಗಕ್ಕೆ 335 ಕೋಟಿ ರೂ ಕೊಡಬೇಕೆಂದು ಸಮಿತಿ ಶಿಫಾರಸ್ಸು ಮಾಡಿತ್ತು. ಆದರೆ, ಸರ್ಕಾರ 247 ಕೋಟಿ ರೂ. ಕೊಟ್ಟಿತು. ಅಲ್ಲಿಗೆ ಹೆಚ್ಚು ಕೊಟ್ಟಿತು. ಅದೇ ಪ್ರಕಾರ, ಬೆಳಗಾಂ ವಿಭಾಗಕ್ಕೆ 314.30 ಕೋಟಿ ರೂ ಕೊಡಬೇಕಾಗಿತ್ತು. ಆದರೆ, ಸರ್ಕಾರ 367.70 ಕೋಟಿ ರೂಪಾಯಿ ಕೊಟ್ಟಿತು. ಇದು ಏಕೆ ಹೀಗಾಯಿತು? ಅಂದರೆ, ನೀವು ಸಮಿತಿಯ ಸೂತ್ರವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲವೋ? ಅಥವಾ ಅದನ್ನು ನಂಬಲಿಲ್ಲವೋ? ಆ ಸಮಿತಿ ಹೇಳಿದ್ದನ್ನು ನೀವು ಸುಳ್ಳೆಂದು ತಿಳಿದುಕೊಂಡಿದ್ದೀರೋ? ಇದಕ್ಕೆ ಕಾರಣಗಳನ್ನು ಕೂಡ ನೀವು ಎಲ್ಲಿಯೂ ಹೇಳಲಿಲ್ಲ. ಆದೇಶ ತೆಗೆದು ಬಿಟ್ಟಿರಿ, ಇದನ್ನು ನೀವು ಯಾವ ತರಹ ಹಂಚಬೇಕೆಂದು ನರ್ಧಾರ ಮಾಡಿ, ಈ ರೀತಿ ತಾರತಮ್ಯ ಮಾಡಿ ನಂಜುಂಡಪ್ಪ ವರದಿಯಲ್ಲಿ ಹಣಕಾಸಿನ ಅಲೊಕೇಷನ್ ಮಾಡಿದಿರಿ? ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿದ್ದಾರೆ. ನಮ್ಮ ಹೈದರಾಬಾದ್ ಕರ್ನಾಟಕದ ಭಾಗದ ಎಲ್ಲಾ ಶಾಸಕರು ಸೇರಿ ಒಂದು ಸಮಾವೇಶ ಸೇರಿದಾಗ ಮಾನ್ಯ ಎಂ.ಪಿ.ಪ್ರಕಾಶ್‌ರವರು ಬಂದಿದ್ದರು. ಅಲ್ಲಿ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದು ಏನೆಂದರೆ, 1,571 ಕೋಟಿ ರೂಪಾಯಿ ಕೊಡುತ್ತೇನೆಂದು ಹೇಳಿದ್ದಾರೆ. ಇದು ಯೋಜನಾ ಗಾತ್ರದ ಅಂತರ್ಗತವಾದ ಹಣ ಹೊರತಾಗಿ ಇದು ಹೆಚ್ಚುವರಿ ಹಣ ಅಲ್ಲ ಎನ್ನುವ ಮಾತನ್ನು ಮಾನ್ಯ ಎಂ.ಪಿ.ಪ್ರಕಾಶ್‌ರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇದು ಸತ್ಯಾಂಶ. ನಾನು ಮಾನ್ಯ ಪ್ರಕಾಶ್‌ರವರಿಗೆ ಅಭಿನಂದಿಸುತ್ತೇನೆ. ಸರ್ಕಾರದ ಜವಾಬ್ದಾರಿ ಹೊತ್ತು ನಮ್ಮ ಭಾಗದ ಕಾಳಜಿ ಇಟ್ಟುಕೊಂಡು ಈ ಮಾತನ್ನು ಅವರು ನೇರವಾಗಿ ಹೇಳಿದ್ದಾರೆ. ಈ ಕೊಟ್ಟಂಥ ದುಡ್ಡು ಏನು ಇದೆ, ಇದು ಯೋಜನಾ ಗಾತ್ರದ ಅಂತರ್ಗತವಾಗಿ ಕೊಟ್ಟಿರುವುದು ಹೊರತಾಗಿ ಯೋಜನಾ ಹೆಚ್ಚುವರಿ ದುಡ್ಡನ್ನು ಕೊಟ್ಟಿಲ್ಲವೆಂದು ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ್ದಾರೆ. ಹೀಗಿರುವಾಗ, ಸಮಾನತೆ ಯಾವ ರೀತಿ ತರಬೇಕು? ಯಾವ ರೀತಿ ಬರಲಿಕ್ಕೆ ಸಾಧ್ಯತೆ ಇದೆ? ಈ ರೀತಿಯಾದರೆ ಸಮಾನತೆ ಬರಲಿಕ್ಕೆ ಸಾಧ್ಯತೆಯಿಲ್ಲ. ಇದು ಬರೀ ಇವತ್ತೇ ನಡೆದಿಲ್ಲ. ಮಾನ್ಯ ಹೊರಟ್ಟಿಯವರು, ಮಾನ್ಯ ಶಂಕರಮೂರ್ತಿಯವರು,

ಹೈಸ್ಕೂಲ್‌ಗಳನ್ನು ಮತ್ತು ಕಾಲೇಜುಗಳನ್ನು ಕೊಟ್ಟರು. ಆದರೆ, ಶಂಕರಮೂರ್ತಿಯವರು, ನಿಷ್ಪಕ್ಷಪಾತವಾಗಿ ಎಲ್ಲೆಲ್ಲಿ ಅವಶ್ಯಕತೆಯಿದೆ, ಸ್ವತಂತ್ರ ನರ್ಧಾರ ತೆಗೆದುಕೊಂಡು ಎಲ್ಲಾ ಕಡೆ ಕೊಟ್ಟರು ಅದರ ಬಗ್ಗೆ ನಮ್ಮ ತಕರಾರಿಲ್ಲ. ಇಡೀ ಐದು ಜಿಲ್ಲೆಗಳಲ್ಲಿ ಒಟ್ಟು 889 ಪ್ರೌಢ ಶಾಲೆಗಳ ಅವಶ್ಯಕತೆಯಿದೆ. ಆದರೆ, ನಮ್ಮ ಶಿಕ್ಷಣ ಸಚಿವರು ಮಂಜೂರು ಮಾಡಿದ್ದು ಎಷ್ಟೆಂದರೆ, ಯಾದಗಿರಿಗೆ 35 ಬೇಡಿಕೆ ಇದ್ದರೆ ಅಲ್ಲಿಗೆ 6 ಕೊಟ್ಟಿದ್ದಾರೆ, ಬೀದರ್‌ಗೆ 60 ಬೇಡಿಕೆ ಇದ್ದರೆ ಅಲ್ಲಿಗೆ 2 ಕೊಟ್ಟಿದ್ದಾರೆ. ಗುಲ್ಬರ್ಗಾಕ್ಕೆ 50 ಬೇಡಿಕೆ ಇದ್ದರೆ ಅಲ್ಲಿಗೆ 8 ಕೊಟ್ಟಿದ್ದಾರೆ. ಬಳ್ಳಾರಿಗೆ 39 ಬೇಡಿಕೆ ಇದ್ದರೆ ಅಲ್ಲಿಗೆ 6 ಕೊಟ್ಟಿದ್ದಾರೆ. ಕೊಪ್ಪಳಕ್ಕೆ 54 ಬೇಡಿಕೆ ಇದ್ದರೆ ಅಲ್ಲಿಗೆ 8 ಕೊಟ್ಟಿದ್ದಾರೆ. ಅದೇ ಪ್ರಕಾರ ಲಿಟ್ರೆಸಿಯಲ್ಲಿ ಅತ್ಯಂತ ಕೆಳಗಿರುವ ಜಿಲ್ಲೆ ರಾಯಚೂರಿಗೆ 52 ಬೇಡಿಕೆ ಇದ್ದರೆ 8 ಕೊಟ್ಟಿದ್ದಾರೆ. ಇವರು ಹಿಂದುಳಿದ ಪ್ರದೇಶಗಳಿಗೆ ಕೊಟ್ಟಿರುವಂಥ ದೇಣಿಗೆ ಇದು. ಇವರು ನಮಗೆ ಕೊಟ್ಟಂಥ ಭಕ್ಷಿಸು ಇದು. ಇದು ನ್ಯಾಯವೇ? ಅದೇ ಪ್ರಕಾರ ಬೆಳಗಾವಿಗೆ ಎಷ್ಟು ಕೊಟ್ಟರು? ಬೆಳಗಾವಿ ವಿಭಾಗಕ್ಕೆ 50 ಕೊಟ್ಟರು. ಮೈಸೂರು ವಿಭಾಗಕ್ಕೆ 64 ಕೊಟ್ಟರು. ಬೆಂಗಳೂರು ವಿಭಾಗಕ್ಕೆ 42 ಕೊಟ್ಟರು. ಅಂದರೆ, ಎಲ್ಲಿ ಶೈಕ್ಷಣಿಕ ಬೆಳವಣಿಗೆ ಜಾಸ್ತಿಯಿದೆ ಅಲ್ಲಿ ಪ್ರೌಢ ಶಾಲೆಗಳು ಜಾಸ್ತಿ ಕೊಟ್ಟರು. ಎಲ್ಲಿ ಶೈಕ್ಷಣಿಕ ಬೆಳವಣಿಗೆ ಹಿಂದೆ ಬಿದ್ದಿದೆ, ಎಲ್ಲಿ ಬೇಡಿಕೆ ಜಾಸ್ತಿಯಿದೆ ಅಲ್ಲಿಗೆ ಹೆಚ್ಚಿಗೆ ಹೈಸ್ಕೂಲ್‌ಗಳನ್ನು ಕೊಡಲಿಲ್ಲ. ಇದು ಇವರು ಮಾಡಿರುವ ಕೆಲಸ. ಅದೇ ಪ್ರಕಾರ ಜ್ಯೂನಿಯರ್ ಕಾಲೇಜ್, ಬೆಂಗಳೂರು ವಿಭಾಗಕ್ಕೆ 15 ಕೊಟ್ಟರು. ಮೈಸೂರು ವಿಭಾಗಕ್ಕೆ 32 ಕೊಟ್ಟರು. ಬರೀ ಹಾಸನಕ್ಕೆ 10 ಜೂನಿಯರ್ ಕಾಲೇಜ್ ಕೊಟ್ಟಿದ್ದಾರೆ. ಅದೇ ಪ್ರಕಾರ ಗುಲ್ಬರ್ಗಾ ವಿಭಾಗಕ್ಕೆ 14 ಕೊಟ್ಟರು. ಬೆಳಗಾವಿ ವಿಭಾಗಕ್ಕೆ 29 ಕೊಟ್ಟರು. ಇಲ್ಲಿ ಸಾಕ್ಷರತಾ ಪ್ರಮಾಣ ನೋಡಿದರೆ, ಬೆಂಗಳೂರು ವಿಭಾಗದ ಸಾಕ್ಷರತಾ ಪ್ರಮಾಣ ಅತ್ಯಂತ ಹೆಚ್ಚಿಗೆ ಇದೆ. 72.91 ಇದೆ. ಮೈಸೂರು ವಿಭಾಗದ ಸಾಕ್ಷರತಾ ಪ್ರಮಾಣ 69.30, ಗುಲ್ಬರ್ಗಾ ವಿಭಾಗದ ಸಾಕ್ಷರತ ಪ್ರಮಾಣ 54.40, ಬೆಳಗಾವಿ ವಿಭಾಗದ ಸಾಕ್ಷರತ ಪ್ರಮಾಣ 65.40.. ಯಾವುದಕ್ಕೂ ಹೊಂದಾಣಿಕೆಯಿಲ್ಲ. ಎಲ್ಲಿ ಸಾಕ್ಷರತಾ ಪ್ರಮಾಣ ಜಾಸ್ತಿಯಿದೆ, ಅಲ್ಲಿ ಇವರು ಹೆಚ್ಚಿಗೆ ಹೈಸ್ಕೂಲ್ ಕೊಡುತ್ತಾರೆ. ಎಲ್ಲಿ ಸಾಕ್ಷರತಾ ಪ್ರಮಾಣ ಕಡಿಮೆ ಇದೆ, ಅಲ್ಲಿ ಸಾಕ್ಷರತೆಯನ್ನು ಬೆಳೆಸಬೇಕು, ಎಲ್ಲಿ

ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜು ತೆರೆದು ಅನುಕೂಲ ಮಾಡಿಕೊಟ್ಟು ಶೈಕ್ಷಣಿಕ ಅಭಿವೃದ್ಧಿ ಮಾಡಬೇಕಾಗಿರುವ ಪ್ರದೇಶಗಳಿಗೆ ಇವರು ಕಡಿಮೆ ಹೈಸ್ಕೂಲ್ಸ್ ಕೊಡುತ್ತಾರೆ. ಇವರು ಹೇಳುವಂಥ ಸಬೂಬು ಏನೆಂದರೆ, ಎಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ ಕಾಲೇಜ್‌ಗಳಿಗೆ ಸೇರುತ್ತಾರೆ, ಒತ್ತಡ ಇದೆ, ಅಲ್ಲಿಗೆ ನಾವು ಜಾಸ್ತಿ ಕೊಡುತ್ತೇವೆ, ಎಲ್ಲಿ ಇಲ್ಲ ಅದಕ್ಕೆ ನಾವು ಕೊಡುವುದಕ್ಕಾಗುವುದಿಲ್ಲ. ಇವತ್ತು ನಾನು ಒಂದು ಮಾತನ್ನು ನೆನಪಿಸಿಕೊಳ್ಳುತ್ತೇನೆ. ಹಿಂದೆ ಗುಲ್ಬರ್ಗಾದವರಾದ ಅಣ್ಣರಾವ್ ಗಣಮುಖಿಯವರು ಶಿಕ್ಷಣ ಸಚಿವರಾಗಿದ್ದರು. ಒಂದು ತಾತ್ವಿಕವಾದ ನಿರ್ಣಯವನ್ನು ತೆಗೆದುಕೊಂಡರು. ಏನೆಂದರೆ, ಎಲ್ಲಿ ದೀಪ ಇರುತ್ತದೆ ಅಲ್ಲಿ ಒಂದು ಶಾಲೆ ಇರುತ್ತದೆ. ಆ ಕಾರಣಕ್ಕಾಗಿ ಆ ದಿವಸ ಕನ್ನಡ ಶಾಲೆಗಳು ಪ್ರಾರಂಭವಾಗಿ ಇವತ್ತು ನಮ್ಮಂಥವರೆಲ್ಲರೂ ಕನ್ನಡ ಶಾಲೆಗಳಿಗೆ ಸೇರಿ, ಕರ್ನಾಟಕದ ಅಭಿಮಾನದಿಂದ ಕನ್ನಡ ನಾಡಿನಲ್ಲಿ ಕನ್ನಡ ಕಲಿತು ಬದುಕುತ್ತೀವೆ. ಸವಲತ್ತುಗಳು ಇಲ್ಲವೆಂದಾಗ ಮಕ್ಕಳು ಶಾಲೆಗೆ ಬರುವುದಿಕ್ಕೆ ಹೇಗೆ ಸಾಧ್ಯವಿದೆ? ಆ ಕಾರಣಗಳನ್ನು ಹೇಳಿ ಇವತ್ತು ಶಾಲೆಗಳನ್ನು ಕೊಡದಿರುವುದು ಬಹಳ ಘೋರವಾದ ಅಪವಾದ. ದಯಮಾಡಿ ಸರ್ಕಾರ ಈ ಚಿಂತನೆ ಬಿಡಬೇಕು. ಜನಸಂಖ್ಯೆಯ ಆಧಾರದ ಮೇಲೆ ಎಲ್ಲಿ ಅವಶ್ಯಕತೆಯಿದೆ, ಎಲ್ಲಿ ಸಾಕ್ಷರತೆ ಕಡಿಮೆ ಇದೆ, ಎಲ್ಲಿ ಜನರ ಬೇಡಿಕೆ ಇದೆ, ಅಲ್ಲಿ ವಿಶೇಷವಾಗಿ ಗಡಿನಾಡಿನಲ್ಲಿ ಈ ಶಾಲಾ ಕಾಲೇಜ್‌ಗಳನ್ನು ಕೊಡುವಂಥ ಕೆಲಸ ಈ ಸರ್ಕಾರ ಮಾಡಬೇಕಾಗಿತ್ತು. ಆದರೆ, ಈ ಕೆಲಸವನ್ನು ಈ ಸರ್ಕಾರದವರು ಮಾಡಲಿಲ್ಲ. ನಾನು ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟಂಥ ಸಚಿವರಿಗೆ ಕಾಗದ ಬರೆದೆ. ಇಲ್ಲಿಯವರೆಗೂ ಯಾರಿಂದಲೂ ಕೂಡ ಉತ್ತರ ಬರಲಿಲ್ಲ. ಕಡೆಗೆ ಗುಲ್ಬರ್ಗಾದಲ್ಲಿ ನಾವೇ ಕೆಲವು ಚಿಂತಕರು, ಕೆಲವು ಪ್ರತಿಷ್ಠಿತರು ಸೇರಿ, ಸಭೆ ಮಾಡಿದೆವು. ಸಭೆ ಮಾಡಿ ಯಾರು ನಂಜುಂಡಪ್ಪ ಹೈಪವರ್ ಕಮಿಟಿಯಲ್ಲಿ ಸದಸ್ಯರಾಗಿದ್ದಾರೆ, ಡಾ: ಟಿ.ಆರ್. ಚಂದ್ರಶೇಖರ್, ಬಿ.ಶೇಷಾದ್ರಿ, ಡಾ. ಅಬ್ದುಲ್ ಅಜೀಜ್ ಅವರನ್ನು ಆಹ್ವಾನ ಮಾಡಿದ್ದೆವು. ಶೇಷಾದ್ರಿಯವರಿಗೆ ಬರಲಿಕ್ಕೆ ಆಗಲಿಲ್ಲ. ಮೊನ್ನೆ ಬೆಂಗಳೂರಿನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಖರ್ಗೆಯವರು, ಎಂ.ಪಿ.ಪ್ರಕಾಶ್‌ರವರು, ನಾವು ಆ ಎಲ್ಲಾ ಭಾಗದ ಸುಮಾರು 20–25 ಜನ ಶಾಸಕರು ಸೇರಿ ಇದೇ ಶಾಸಕರ

ಭವನದಲ್ಲಿ ಸಭೆ ಮಾಡಿದೆವು. ಹೈಪವರ್ ಕಮಿಟಿಯಲ್ಲಿ ಕೆಲಸ ಮಾಡಿದಂಥ ಡಾ: ಅಬ್ದುಲ್ ಅಜೀಜ್‌ರವರು, ಅವರೇ ಬಹಳ ಸ್ಪಷ್ಟವಾಗಿ, ನಿಮ್ಮ ಭಾಗಕ್ಕೆ ಅನ್ಯಾಯವಾಗಿದೆ, ನಿಮಗೇನು ಸಿಗಬೇಕಾಗಿತ್ತೋ ಅದು ಸಿಕ್ಕಿಲ್ಲ, ಎನ್ನುವ ಮಾತನ್ನು ಹೇಳಿದರು. ಕನಕಪುರ, ಗುಬ್ಬಿ, ಪಾವಗಡ, ದೇವದುರ್ಗ, ಜೇವರ್ಗಿ, ಅಫ್ಜಲ್‌ಪುರ, ಆಳಂದ, ಹೀಗೆ ಎಲ್ಲವೂ ಕೂಡ ಹಿಂದುಳಿದ ಪ್ರದೇಶಗಳು. ಆದರೆ, ನಂಜುಂಡಪ್ಪನವರು ಬಹಳ ಮುಖ್ಯವಾಗಿ ಒಂದು ಮಾತು ಹೇಳುತ್ತಾರೆ. Deprivation index ಆಧಾರದ ಮೇಲೆ ನೀವು ಹಣವನ್ನು ಹಂಚಬೇಕು. ಅಂದರೆ, ಅತ್ಯಂತ ಕೆಳಗಡೆ ಯಾವ ತಾಲ್ಲೂಕು ಇದೆ, ಅದಕ್ಕೆ ಹೆಚ್ಚಿನ ಶಕ್ತಿ ಕೊಡಬೇಕು. ಅಂದರೆ, ಇಡೀ ರಾಜ್ಯದ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ಬರುತ್ತದೆ. ದೇವದುರ್ಗದ ತಾಲ್ಲೂಕಿಗೆ ಹೆಚ್ಚಿನ ಅನುದಾನ, ಎಲ್ಲಾ ಸವಲತ್ತುಗಳು, ಎಲ್ಲಾ ಸೌಕರ್ಯಗಳು, ಸರಕಾರದ ಎಲ್ಲಾ ಮೂಲ ಸೌಲಭ್ಯಗಳು ಅಲ್ಲಿಗೆ ಹೋಗಬೇಕು. ಇದನ್ನು ನಂಜುಂಡಪ್ಪನವರು Deprivation index ಹೇಳುತ್ತಾರೆ. ಆದರೆ ಇವರೇನು ಮಾಡಿದರು? ಎಲ್ಲರಿಗೂ ಸಮಾನವಾಗಿ ಹಂಚಿದರು. ಅತ್ಯಂತ ಹಿಂದುಳಿದವರಿಗೆ 50, ಅತಿ ಹಿಂದುಳಿದವರಿಗೆ 30, ಹಿಂದುಳಿದವರಿಗೆ 20, ಎಂದು ಲೆಕ್ಕಾಚಾರ ಹಾಕಿ ಈ ಅನುದಾನ ಬಿಡುಗಡೆ ಮಾಡಲಿಕ್ಕೆ ಪ್ರಾರಂಭಿಸಿದರು. ಮೊದಲನೆ ಕಂತಿನಲ್ಲಿ 125 ಕೋಟಿ ರೂಪಾಯಿ ಬಿಡುಗಡೆ ಮಾಡುವ ಆದೇಶವನ್ನು ಸರ್ಕಾರದವರು ತೆಗೆದರು. ಆ ಆದೇಶದಲ್ಲೂ ಕೂಡ ನಮಗೆ ದೊಡ್ಡ ಅನ್ಯಾಯ ಮಾಡಿದರು. ಎಷ್ಟು ನಮಗೆ ಸಿಗಬೇಕಾಗಿತ್ತೋ ಅಷ್ಟು ನಮಗೆ ಸಿಗಲಿಲ್ಲ. ಆ ಪ್ರಕಾರ 2 ಸಾವಿರ ಕೋಟಿ ಕೊಡಬೇಕು ಅದನ್ನು ಕೊಡಲಿಲ್ಲ. ಮೊದಲನೆ ಕಂತಿನಲ್ಲಿ 125 ಕೋಟಿ ಕೊಟ್ಟಿದ್ದಾರೆ. ಇದರಲ್ಲಿ ನಮಗೆ ಸುಮಾರು 28 ಕೋಟಿ ಖೋತಾ ಆಗಿದೆ. ಈ ರೀತಿಯಾಗಿ ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿ ಬಿಟ್ಟು, ಇವತ್ತು ಯಾವ ತರಹ ನಂಜುಂಡಪ್ಪನವರ ವರದಿ ಅನುಷ್ಠಾನಕ್ಕೆ ತರುತ್ತಾರೆ? ಇದರ ಬಗ್ಗೆ ದೊಡ್ಡ ಅನುಮಾನ ನಮ್ಮ ಭಾಗದ ಎಲ್ಲಾ ಜನರಿಗೆ ಬಂದಿದೆ. ರಾಮನಗರದ ಉದಾಹರಣೆಯನ್ನು ನಾನು ಕೊಡುತ್ತೇನೆ. ನಾನು ಇದನ್ನು ರಾಜಕೀಯವಾಗಿ ಕೊಡುತ್ತಿಲ್ಲ. ರಾಮನಗರ ಹೊಸ ಜಿಲ್ಲೆಯನ್ನಾಗಿ ಮಾಡಿದ್ದಾರೆ. ಗುಲ್ಬರ್ಗಾ ಕೂಡ ಒಂದು

ಜಿಲ್ಲೆ. ಈ ಎರಡೂ ಜಿಲ್ಲೆಗಳನ್ನು ತುಲನಾತ್ಮಕ ಮಾಡಿ ಒಬ್ಬ ತಜ್ಞರು ಒಂದು ಲೇಖನ ಬರೆದಿದ್ದಾರೆ. ರಾಮನಗರದ ಸಾಕ್ಷರತೆ ಶೇಕಡ 60 ಕ್ಕಿಂತ ಹೆಚ್ಚಿಗೆ. ಅದೇ ಪ್ರಕಾರ ಗುಲ್ಬರ್ಗಾದ ಜಿಲ್ಲೆಯ ವರಮಾನ ಅದು ಶೇಕಡ 4.69 ಇದ್ದರೆ ಇವತ್ತು ಗುಲ್ಬರ್ಗಾದ ವರಮಾನ 3.99 ಕ್ಕೆ ಇಳಿದಿದೆ. ಅದೇ ಪ್ರಕಾರ ರಾಮನಗರ ಜಿಲ್ಲೆಯ ಪಾಲು ಇದರಲ್ಲಿ 3.69 ಇದ್ದರೆ ಅದು ಶೇಕಡ 4.12ಕ್ಕೆ ಏರಿದೆ. ಇದೇ ಅವಧಿಯಲ್ಲಿ ಗುಲ್ಬರ್ಗಾದಲ್ಲಿ ವರಮಾನ 12.58 ಇದ್ದರೆ ರಾಮನಗರದ ವರಮಾನ 21.13 ಇದೆ. ಇವತ್ತಿನ ದಿವಸ ಇಡೀ ಜಿಲ್ಲೆಗಳಲ್ಲಿ ರಾಮನಗರದ 5ನೇ ಸ್ಥಾನಕ್ಕೆ ಏರುತ್ತದೆ. ಆದರೆ, ಗುಲ್ಬರ್ಗಾ ಜಿಲ್ಲೆ 21ನೇ ಸ್ಥಾನಕ್ಕೆ ಇಳಿಯುತ್ತದೆ. ಈ ರೀತಿಯಾದ ತಾರತಮ್ಯ ನಡೆದುಕೊಂಡು ಹೋದರೆ ಜಿಲ್ಲೆ–ಜಿಲ್ಲೆಗಳ ಮಧ್ಯೆ ಈ ರೀತಿಯಾದ ಅಂತರ ಬೆಳೆದುಕೊಂಡು ಹೋಗುತ್ತದೆ. ಇದರಿಂದ ಮುಂದಕ್ಕೆ ಬಹಳ ದೊಡ್ಡ ಕಂದಕ ಉಂಟಾಗುತ್ತದೆ. ಗಡಿನಾಡಿನಲ್ಲಿರುವ ಜನರ ಮನಸ್ಸಿನಲ್ಲಿ ಏನದೆ ಎಂದರೆ, ನಾವು ಏಕಾದರೂ ಕರ್ನಾಟಕಕ್ಕೆ ಬಂದು ಸೇರಿಕೊಂಡೆವು ಎನ್ನತಕ್ಕಂಥ ನೋವು ಬಹಳಷ್ಟು ಜನರಿಗೆ ಇವತ್ತಿನ ದಿವಸ ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಈ ಮಾತನ್ನು ಹೇಳಿದ್ದೇನೆ. ನಾವು ಕರ್ನಾಟಕ ರಾಜ್ಯಕ್ಕೆ ಸೇರಿಕೊಂಡಿದ್ದರಿಂದ ನಮಗೆ ಶಿಕ್ಷೆ ಕೊಡುತ್ತಿದ್ದಾರೆಂದು ಅಲ್ಲಿರತಕ್ಕಂಥವರು ಪಶ್ಚಾತ್ತಾಪ ಪಡುತ್ತಾ, ನಾವು ಬೇರೆ ರಾಜ್ಯಕ್ಕೆ ಹೋಗಿದ್ದರೆ ನಮಗೆ ಸವಲತ್ತುಗಳು ಸಿಗಬಹುದಾಗಿತ್ತೇನೊ ಎನ್ನುವಂಥ ಭಾವನೆ ಅಲ್ಲಿರತಕ್ಕಂಥ ಜನರಲ್ಲಿದೆ. ಈ ಒಂದು ಕಾರಣಕ್ಕಾಗಿಯೇ ಅಲ್ಲಿ ಒಡಕಿನ ಧ್ವನಿ ಎದ್ದಿದೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಒಂದು ವೇಳೆ ಸರ್ಕಾರದವರು ಸರಿಸಮಾನತೆ ದೃಷ್ಟಿಯಿಂದ ಈ ರಾಜ್ಯವನ್ನು ಅಭಿವೃದ್ಧಿ ಮಾಡದೆ ಇದ್ದರೆ ಈ ಒಡಕಿಗೆ ಇನ್ನೂ ಕೂಡ ಶಕ್ತಿ ಕೊಟ್ಟಂತಾಗುತ್ತದೆ.ಈ ವಿಚ್ಛಿದ್ರಕಾರಿ ಶಕ್ತಿಗಳಿಗೆ ನಾವು ಬೆಂಬಲ ಕೊಟ್ಟಂತಾಗುತ್ತದೆ. ಈ ಕಾರಣಕ್ಕಾಗಿಯೇ ಇವತ್ತಿನ ದಿವಸ ನಕ್ಸಲ್‌ವಾದಿಗಳು ಬೆಳೆಯುತ್ತಿದ್ದಾರೆ. ಎಲ್ಲೆಲ್ಲಿ ನಕ್ಸಲ್ ಚಟುವಟಿಕೆ ಇದೆಯೋ, ಅಲ್ಲಿನ ಪ್ರದೇಶದ ಮೂಲಭೂತ ಸೌಲಭ್ಯಗಳಿಗೆ ನಾವು ಹೆಚ್ಚಿನ ಅನುದಾನ ಕೊಡಬೇಕೆಂದು ತಾವು ಹೇಳುತ್ತಿದ್ದೀರಿ. ಆದ್ದರಿಂದ ನೀವು ಎಲ್ಲಿ ಸೌಲಭ್ಯಗಳನ್ನು ಕೊಟ್ಟಿಲ್ಲವೋ ಆ ಪ್ರದೇಶಗಳಿಗೆ ನಕ್ಸಲ್‌ವಾದಿಗಳನ್ನು ಕರೆದುಕೊಂಡು ಬರೋಣವೇ? ಇದು ಸಾಧ್ಯವಿಲ್ಲ. ಆದರೆ, ಈ ಎಲ್ಲಾ

ಮುಂದಾಲೋಚನೆ ಇಟ್ಟುಕೊಂಡು ಈ ಒಂದು ಕೆಲಸವನ್ನು ಮಾಡುವುದಕ್ಕೆ ಸರ್ಕಾರ ಮುಂದಾಗಬೇಕು. ಇಡೀ ಕರ್ನಾಟಕ ರಾಜ್ಯದಲ್ಲಿರುವ ಸುಮಾರು 5–6 ಕೋಟಿ ಜನಸಂಖ್ಯೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸುಮಾರು 1 ಕೋಟಿ ಜನ ವಾಸ ಮಾಡುತ್ತಿದ್ದಾರೆ. ಈ ರಾಜ್ಯದಲ್ಲಿ ನಮಗೆ ನ್ಯಾಯ ಮತ್ತು ಯಾವುದೇ ರೀತಿಯ ಮೂಲಭೂತ ಸೌಕರ್ಯಗಳು ಸಿಗುತ್ತಿಲ್ಲವೆಂದು ಹಾಗೂ ಈ ರಾಜ್ಯದಲ್ಲಿ ನಮ್ಮನ್ನು ನರ್ಲಕ್ಷ್ಯ ಮಾಡುತ್ತಿದ್ದಾರೆಂದು ಭಾವನೆ ಯಾವತ್ತಾದರೂ ಅಲ್ಲಿ ವಾಸ ಮಾಡುತ್ತಿರುವ 1 ಕೋಟಿ ಜನರ ಮನಸ್ಸಿನಲ್ಲಿ ಕಿಡಿಕಾರಿದರೆ ಬಹುಶಃ ಆವತ್ತು ಕರ್ನಾಟಕ ಒಂದಾಗಿ ಉಳಿಯುವುದಕ್ಕೆ ಅವಕಾಶ ಇರುವುದಿಲ್ಲ. ಈ ರೀತಿಯಾಗುವುದಕ್ಕೆ ಬಿಡಬಾರದೆಂಬ ಕಾರಣದಿಂದ ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತಿನ ದಿವಸ ಅಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಮುಂದೆ ಬರಬೇಕೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಕುಡಿಯುವ ನೀರಿಗೋಸ್ಕರ ಮೊನ್ನೆ ದಿವಸ ದುಡ್ಡನ್ನು ಹಂಚಿಕೆ ಮಾಡಿದ್ದಾರೆ. ಯಾವ ರೀತಿಯಾಗಿ ಹಂಚಿಕೆ ಮಾಡಿದ್ದಾರೆಂದರೆ, ಡಾ:ನಂಜುಂಡಪ್ಪ ವರದಿ ಆಧಾರಿತ ಅತಿ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಅನುದಾನ ವಿನಿಯೋಗ ಎಂದು ಹೇಳಿದ್ದಾರೆ. 9 ತಾಲ್ಲೂಕುಗಳಿಗೆ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಇದಕ್ಕೆ ಏನು ಕಾರಣ ಕೊಡುತ್ತಾರೆಂದರೆ, ಸಾಮಾನ್ಯ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ರಾಜ್ಯ ಮತ್ತು ಕೇಂದ್ರ ಒದಗಿಸಿರುವ ಅನುದಾನವನ್ನು ಹೊರತುಪಡಿಸಿ ಗಡಿಪ್ರದೇಶ ಹಾಗು ದೂರದ ತಾಲ್ಲೂಕುಗಳಲ್ಲಿ ಹೊಸ ಯೋಜನೆಗಳನ್ನು ರೂಪಿಸಿ ಅನುಷ್ಠನಗೊಳಿಸುವ ಸಲುವಾಗಿ ವಿನಿಯೋಗಿಸಬೇಕಾಗಿದೆ. ಈ ಅನುದಾನವನ್ನು ಸಮರ್ಪಕವಾಗಿ ಕಾಲಮಿತಿಯೊಳಗೆ ಸದ್ವಿನಿಯೋಗ ಮಾಡಿಕೊಳ್ಳುವ ಸಂಬಂಧ ಅಗತ್ಯ ಕ್ರಿಯಾ ಯೋಜನೆಗಳನ್ನು ರೂಪಿಸಿ, ಸರ್ಕಾರದ ಅನುಮೋದನೆ ಪಡೆಯತಕ್ಕಂದೆಂದು ಹೇಳಿ, 9 ತಾಲ್ಲೂಕುಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಯಾವ್ಯಾವ ತಾಲ್ಲೂಕುಗಳೆಂದರೆ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕು, ಇಲ್ಲಿ ಯಾವ ಗ್ರಾಮಗಳೆಂದು ಹೆಸರುಗಳನ್ನು ಹೇಳಿಲ್ಲ. ಔರಾದ್ ತಾಲ್ಲೂಕಿಗೆ ಕೊಡತಕ್ಕಂಥದ್ದು ನಿಜವಾಗಿಯೂ ಯೋಗ್ಯವಾದಂಥದ್ದು. ಏಕೆಂದರೆ, ನಮ್ಮ ವಿಕೇಂದ್ರೀಕರಣ

ವ್ಯವಸ್ಥೆಯಲ್ಲಿ ಈ ಅನುದಾನವನ್ನು ಕೊಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇದೆ. ಆದರೆ, ಸಲಹೆಗಳು, ಸೂಚನೆಗಳು ಕೆಳಮಟ್ಟದಿಂದ ಬರಬೇಕು. ಮತ್ತು ಗುಲ್ಬರ್ಗಾ ಜಿಲ್ಲೆಯ ಆಳಂದಕ್ಕೆ 1.5 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಈ 1.5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಾಗ ಒಬ್ಬ ಮಂತ್ರಿ ತನ್ನ ಕ್ಷೇತ್ರಕ್ಕೆ ಬರತಕ್ಕಂಥ ಗ್ರಾಮಗಳನ್ನು ಇಲ್ಲಿ ಬರೆದುಕೊಟ್ಟು, ಸರ್ಕಾರದ ಆದೇಶವನ್ನು ಮಾಡಿ ಕಳುಹಿಸಿದ್ದಾರೆ. ಅಂದರೆ, ಅಲ್ಲಿನ ಶಾಸಕರಿಗೆ ಏನೂ ಅಧಿಕಾರ ಇಲ್ಲವೇ? ಅಲ್ಲಿ ಮೂಲಭೂತವಾಗಿ ಏನು ಸಮಸ್ಯೆ ಇದೆ ಎಂಬುದರ ಬಗ್ಗೆ, ಗ್ರಾಮ ಪಂಚಾಯತ್‌ನಲ್ಲಿ ಏನು ಸಮಸ್ಯೆ ಇದೆ ಎಂಬುದರ ಬಗ್ಗೆ ಅಲ್ಲಿ ಎಲ್ಲೆಲ್ಲಿ ಫ್ಲೋರೈಡ್ ಅಂಶ ನೀರಿನಲ್ಲಿದೆ ಎಂಬುದನ್ನು ಮತ್ತು ಎಲ್ಲಿ ನೀರು ಸಿಗುತ್ತಿಲ್ಲವೆಂದು ಮತ್ತು ನೀರು ಸಿಗಬೇಕಾದರೆ ಏನು ಮಾಡಬೇಕೆಂಬುದರ ಬಗ್ಗೆ ಜಿಲ್ಲಾ ಪಂಚಾಯತ್ ಸದಸ್ಯರಿಗೆ ಅಧಿಕಾರ ಕೊಟ್ಟಿಲ್ಲ. ನೇರವಾಗಿ ಇಲ್ಲಿಂದಲೇ ಆದೇಶ ಮಾಡಿ ಕಳುಹಿಸಿದ್ದಾರೆ. ಆಳಂದ ತಾಲ್ಲೂಕಿನ ಎರಡು ಕಂದಾಯ ವಿಭಾಗಗಳು ಕಮಲಾಪುರ ಕ್ಷೇತ್ರಕ್ಕೆ ಸಿಗುತ್ತದೆ. ಈ ಕಮಲಾಪುರ ಕ್ಷೇತ್ರಕ್ಕೆ ಸೇರಿರುವ ಸುಮಾರು 5 ಹಳ್ಳಿಗಳನ್ನು ಇದರಲ್ಲಿ ಸೇರಿಸಿ ಮಂಜೂರು ಮಾಡಿ ಕಳುಹಿಸಿದ್ದಾರೆ. ಅದೇ ಪ್ರಕಾರ ಚಿಂಚೋಳಿ ತಾಲ್ಲೂಕಿಗೆ ಕೊಟ್ಟಿದ್ದಾರೆ, ಇಲ್ಲಿಯೂ ಕೂಡ ಯಾವ ಗ್ರಾಮಗಳೆಂದು ಹೆಸರುಗಳನ್ನು ಹೇಳಿಲ್ಲ. ಮತ್ತೆ ಕುಷ್ಟಗಿ ತಾಲ್ಲೂಕಿಗೆ ಕೊಟ್ಟಿದ್ದಾರೆ. ಇಲ್ಲಿ ಕೂಡ ಗ್ರಾಮಗಳ ಹೆಸರುಗಳನ್ನು ಹೇಳಿಲ್ಲ. ಮತ್ತೆ ಲಿಂಗಸೂರು ತಾಲ್ಲೂಕಿಗೆ ಕೊಟ್ಟಿದ್ದಾರೆ. ಆದರೆ, ಇಲ್ಲಿ ಗ್ರಾಮಗಳ ಹೆಸರುಗಳನ್ನು ಬರೆದಿದ್ದಾರೆ. ಮತ್ತು ದೇವಗುರ್ಗ ತಾಲ್ಲೂಕಿಗೆ ಕೊಟ್ಟಿದ್ದಾರೆ. ಅಲ್ಲಿ ಗ್ರಾಮಗಳ ಹೆಸರುಗಳನ್ನು ಹೇಳಿಲ್ಲ. ಬಸವನಬಾಗೇವಾಡಿಗೆ ಕೊಟ್ಟಿದ್ದಾರೆ. ಆದರೆ, ಇಲ್ಲಿ ಹೆಸರುಗಳನ್ನು ಬರೆದಿದ್ದಾರೆ. ಅದೇ ಪ್ರಕಾರ ಹೊಸದುರ್ಗ, ಚೆನ್ನಗಿರಿ, ಹರಪ್ಪನಹಳ್ಳಿ, ಬಾಗೇಪಲ್ಲಿ, ಪಾವಗಡ ತಾಲ್ಲೂಕುಗಳು ಸೇರಿ ಒಟ್ಟು 15.20 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೋಸ್ಕರ ಬಿಡುಗಡೆ ಮಾಡಿದ್ದಾರೆ. ಈ ರೀತಿಯಾದ ಒಂದು ಮೂಲ ಸೂತ್ರವನ್ನು ಇಟ್ಟುಕೊಂಡು ಹಣವನ್ನು ಬಿಡುಗಡೆ ಮಾಡುವುದಾಗಿದ್ದರೆ, ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಿಗೆ ಸರಿ ಸಮಾನವಾಗಿ ನೀವು ಹಂಚಬಹುದಾಗಿತ್ತು. ಮತ್ತೆ ಇನ್ನೂ ಗಡಿ ತಾಲ್ಲೂಕುಗಳು ಸಹ ಕೊಡಬಹುದಾಗಿತ್ತು. ಅವರೇನು ಪಾಪ ಮಾಡಿದ್ದರು?

ಸೇಡಂ, ಯಾದಗಿರಿ ತಾಲ್ಲೂಕುಗಳು ಏನು ಪಾಪ ಮಾಡಿದ್ದವು? ಮತ್ತೆ ಗಡಿ ಭಾಗದಲ್ಲಿರುವ ಜಿಲ್ಲೆಗಳಲ್ಲಿನ ತಾಲ್ಲೂಕುಗಳು ಏನು ಪಾಪ ಮಾಡಿವೆ? ಈ ತಾಲ್ಲೂಕುಗಳಿಗೆ ಏಕೆ ಹಣವನ್ನು ಬಿಡುಗಡೆ ಮಾಡಲಿಲ್ಲ? ಏನು ಸೂತ್ರವನ್ನು ಇಟ್ಟುಕೊಂಡು ಈ ರೀತಿಯಾಗಿ ಬಿಡುಗಡೆ ಮಾಡಿದ್ದೀರಿ? ಕೈಯಲ್ಲಿ ಹಣ ಬಂದಿದೆ ಎಂದು ಮನಸ್ಸಿಗೆ ಬಂದ ಹಾಗೆ ಇಲ್ಲಿ ಕುಳಿತುಕೊಂಡು ಹಣ ಬಿಡುಗಡೆ ಮಾಡುವುದಾದರೆ ಅಲ್ಲಿ ಸಮಾನತೆ ಬರುವುದಕ್ಕೆ ಸಾಧ್ಯವಿದೆಯೇ? ಮತ್ತೆ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯತೆ ಇದೆಯೇ? ನಂಜುಂಡಪ್ಪನವರ ವರದಿಯನ್ನು ತಮ್ಮ ರಾಜಕೀಯ ಲಾಭಗಳಿಗೋಸ್ಕರ ಇವತ್ತಿನ ದಿವಸ ಉಪಯೋಗ ಮಾಡಿಕೊಳ್ಳುತ್ತಾ ಹೋದರೆ ಇದರ ಮೂಲ ಉದ್ದೇಶ ಸೋತು ಹೋಗುತ್ತದೆ, ಬಿದ್ದು ಹೋಗುತ್ತದೆ. ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡುವುದಕ್ಕಾಗಿ ಸರ್ಕಾರ ಮಾನ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಈ ಸಮಿತಿಯ ಅಧ್ಯಕ್ಷರಾಗಿರುವ ಮಾನ್ಯ ಎ. ರವೀಂದ್ರರವರನ್ನು ನಾನು ಭೇಟಿ ಮಾಡಿದ್ದೇನೆ.

ಉಪಾಧ್ಯಕ್ಷರು:– ಮಾನ್ಯ ಬಿ.ಆರ್. ಪಾಟೀಳ್‌ರವರೆ, ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಈಗಾಗಲೇ ಅರ್ಧ ಗಂಟೆಯಾಗಿದೆ. ಚರ್ಚೆಯ ಅವಧಿ ಬಗ್ಗೆ ಒಂದು ಗಂಟೆಯವರೆಗೆ ಮಾತ್ರ ಎಂದು ಈಗಾಗಲೇ ಕಮಿಟ್‌ಮೆಂಟ್ ಆಗಿದೆ.

ಶ್ರೀ ಬಿ.ಆರ್.ಪಾಟೀಲ್:– ನಾನು ವಿಷಯಾಂತರ ಮಾಡಿ ಮಾತನಾಡುತ್ತಿದ್ದರೆ, ತಾವು ದಯವಿಟ್ಟು ಅವಕಾಶ ಕೊಡಬೇಡಿ.

ಉಪಾಧ್ಯಕ್ಷರು:– 4.45 ಗಂಟೆಗೆ ಚರ್ಚೆ ಪ್ರಾರಂಭ ಮಾಡಿ 5.45 ಗಂಟೆಗೆ ಮುಗಿಯಬೇಕೆಂದು ಹೇಳಿದ್ದಾರೆ.

ಶ್ರೀ ಬಿ.ಆರ್.ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನಾನು ಯಾವುದೇ ರಾಜಕೀಯ ಮತ್ತು ವಿಷಯಾಂತರ ಮಾಡಿ ಮಾತನಾಡುತ್ತಿಲ್ಲ.

ಉಪಾಧ್ಯಕ್ಷರು:– ಬೇಗ ಮಾತನಾಡಿ ಮುಗಿಸಿ. ಇನ್ನೂ ಐದಾರು ಜನ ಮಾತನಾಡಬೇಕಾಗಿದೆ. ಅವರೆಲ್ಲಾ ಯಾವಾಗ ಮಾತನಾಡುವುದು? ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಅರ್ಧಗಂಟೆ ಆಯಿತು.

ಶ್ರೀ ಬಿ.ಆರ್. ಪಾಟೀಲ್:– ಈ ವಿಷಯ ಬಹಳ ಗಂಭೀರವಾಗಿದೆ ಎಂದು 14 ಜನ ಶಾಸಕರು ಸಹಿ ಮಾಡಿ ನಿನ್ನೆ ದಿವಸ ನಿಲುವಳಿ ಸೂಚನೆ ತಂದಿದ್ದೇವೆ.

ಉಪಾಧ್ಯಕ್ಷರು:– ಬೇರೆಯವರು ಕೂಡ ಸ್ವಲ್ಪ ಮಾತನಾಡುವುದಕ್ಕೆ ಬಿಡಿ. ಯಾವುದಾದರೂ ವಿಷಯಗಳಿದ್ದರೆ ಅವರುಗಳೂ ಕೂಡ ಹೇಳಲಿ. ಎಲ್ಲವನ್ನು ನೀವೇ ಹೇಳಿದರೆ ಹೇಗೆ?

ಶ್ರೀ ಬಿ. ಆರ್. ಪಾಟೀಲ್:– ಬೇರೆ ವಿಷಯಗಳು ಚರ್ಚೆಗೆ ಬಂದಾಗ ಅದಕ್ಕೆ ಸಮಯ ಬಹಳಷ್ಟು ಸಿಗುತ್ತದೆ. ಹಿಂದುಳಿದ ಪ್ರದೇಶಗಳ ಸಮಸ್ಯೆಗಳ ಬಗ್ಗೆ ಚರ್ಚೆ ಬಂದಾಗ ಸಮಯವಿಲ್ಲವೆಂದರೆ ಹೇಗೆ? ಮಾನ್ಯ ಪ್ರಧಾನ ಮಂತ್ರಿಗಳು ಬರುತ್ತಾರೆಂದರೆಂದು ನಾಳೆ ದಿವಸ ಸದನವನ್ನು ಮೊಟಕುಗೊಳಿಸಿದ್ದೀರಿ. ಶನಿವಾರ ನಡೆಸಬೇಕೆಂದು ನಮ್ಮೆಲ್ಲ ಹಿರಿಯ ಸದಸ್ಯರು ಹೇಳಿದ್ದರೂ ಕೂಡ ಅದಕ್ಕೆ ಒಪ್ಪಿಲ್ಲ. ಈಗ ಬೇಗನೆ ಮುಗಿಸಬೇಕೆಂದು ಹೇಳುತ್ತೀರಿ, ಇದು ಹೇಗೆ ಸಾಧ್ಯವಿದೆ? ತಾವೇ ಹೇಳಿ. ನಾನು ಮಾನ್ಯ ರವೀಂದ್ರರವರ ಹತ್ತಿರ ಹೋದಾಗ ಇದರ ಬಗ್ಗೆ ನೋಡುತ್ತೇನೆ ಮತ್ತು ಇಲಾಖೆಗಳಿಗೆ ಹೇಳಿದ್ದೇನೆ. ಮತ್ತೆ ಅವರ ಜೊತೆ ಮಾತನಾಡುತ್ತೇನೆಂದು ಹೇಳಿದರು. ಆದರೆ, ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸುವ ಅಧಿಕೃತ ಆದೇಶ ಇಲ್ಲಿಯವರೆಗೆ ಹೊರಕ್ಕೆ ಬಂದಿಲ್ಲ. ಇದು ಕಾಗದದ ಕುದುರೆಯಂತೆ ಸುಮ್ಮನೆ ನಡೆದಿದೆಯಷ್ಟೆ. ಕಾಗದದ ಕುದುರೆಯೆಂದರೆ, ಅದು ಓಡುವುದಿಲ್ಲ. ಈ ರೀತಿಯಾಗಿ ಇಲಾಖೆಗಳಿಗೆ ಜವಾಬ್ದಾರಿ ಕೊಟ್ಟು ಹಣ ಹಂಚುವುದಕ್ಕೆ ಬಿಟ್ಟರೆ, ನಿಜವಾಗಿಯೂ ಇದು ದಾರಿ ತಪ್ಪಿ ಹೋಗುತ್ತದೆ. ಈ ಕಾರಣಕ್ಕಾಗಿಯೇ ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡಿಸುವುದಕ್ಕೆ ಯೋಜನಾ ಮಂಡಳಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿದೆ. ಈ ಸಮಿತಿಗೆ ಸಂಪೂರ್ಣವಾದಂಥ ಅಧಿಕಾರವನ್ನು ಕೊಡಬೇಕು. ಮತ್ತೆ ಅದರ ಜವಾಬ್ದಾರಿ ಮತ್ತು ಕಾರ್ಯದ ಇತಿಮಿತಿಯನ್ನು ಸಂಪೂರ್ಣವಾಗಿ ಪ್ರಸ್ತಾಪ ಮಾಡಬೇಕು. ಆಗ ಮಾತ್ರ ನಂಜುಂಡಪ್ಪ ವರದಿಯನ್ನು ಅನುಷ್ಠಾನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ನಂಜುಂಡಪ್ಪ ವರದಿಯ ಅನ್ವಯ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ

ರಸ್ತೆಗಳ ಅಭಿವೃದ್ಧಿಗಳಿಗೆಂದು PWD ಇಂದ ಒಂದು ಬುಕ್‌ಲೆಟ್ ಹೊರಡಿಸಿದ್ದಾರೆ. ಎಲ್ಲಾ ಕ್ಷೇತ್ರಗಳಿಗೆ ಸುಮಾರು 1.60 ಕೋಟಿ ರೂಪಾಯಿಗಳ ಅನುದಾನವನ್ನು ಹಂಚಿಕೆ ಮಾಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿಯೂ ಕೂಡ ಭಾಗಗಳು ಬೇರೆ ಕ್ಷೇತ್ರಕ್ಕೆ ಸೇರುತ್ತದೆ. ಇಲ್ಲಿ ಬಹುತೇಕವಾಗಿ 60:40 ಮಾಡುತ್ತಾರೆ. ಅಂದರೆ, 4 ಕಂದಾಯ ವಿಭಾಗವಿದ್ದರೆ 60 ಮತ್ತು ಉಳಿದ ಎರಡು ಕಂದಾಯ ಭಾಗಗಳಿದ್ದರೆ 40 ಮಾಡುತ್ತಾರೆ. ಈ ಒಂದು ಅನುಪಾತದಲ್ಲಿ ಅನುದಾನವನ್ನು ಹಂಚಿಕೆ ಮಾಡುತ್ತಾರೆ. ಆದರೆ, ಇಲ್ಲಿ 60:40 ಅನುಪಾತದ ರೀತಿಯಲ್ಲಿ ಅನುದಾನವನ್ನು ಹಂಚುವುದನ್ನು ಬಿಟ್ಟು ನೇರವಾಗಿ ಇಲ್ಲಿಂದಲೇ ತಮಗೆ ಬೇಕಾದವರಿಗೆ, ತಮ್ಮ ಪಕ್ಷದವರು ಇರತಕ್ಕಂಥ ಭಾಗಗಳಿಗೆ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಇದು ಅನ್ಯಾಯವಲ್ಲವೇ? ಈ ರೀತಿಯಾದರೆ, ನಂಜುಂಡಪ್ಪ ವರದಿಗೆ ನೀವು ಕೊಟ್ಟಂಥ ಮರ್ಯಾದೆಯಾದರೂ ಏನು? ಇದನ್ನು ಏತಕ್ಕೋಸ್ಕರ ತಂದಿರಿ? ಇದನ್ನು ತರಕ್ಕಂಥ ಉದ್ದೇಶವಾದರೂ ಏನಿತ್ತು? ಆದರೂ ಕೂಡ ಸರ್ಕಾರದವರು ಬೇರೆ ಬೇರೆ ಕ್ಷೇತ್ರಕ್ಕೆ ಸಾಕಷ್ಟು ಹಣವನ್ನು ಹಂಚುತ್ತಿದ್ದೀರಿ. ಈ ದುಡ್ಡನ್ನು ಹಂಚುವುದಕ್ಕೆ ನಿಮಗೆ ಸಂಪೂರ್ಣವಾದಂಥ ಅಧಿಕಾರ ಇತ್ತು. ಆದರೆ, ನೀವು ಅಧಿಕೃತವಾಗಿ ಆದೇಶವನ್ನು ಹೊರಡಿಸಿ ಅದನ್ನು ಅನುಷ್ಠಾನ ಮಾಡುತ್ತೇವೆಂದು ಹೇಳಿದ ಮೇಲೂ ನೀವು ದಾರಿ ತಪ್ಪಿ ಸಿಕ್ಕಾಪಟ್ಟೆ ಉಪಾಯೋಗ ಮಾಡುತ್ತಿರುವುದು ಸರಿಯಿಲ್ಲ. ಬಿಜಾಪುರ ಜಿಲ್ಲೆ ನಮ್ಮ ಜಿಲ್ಲೆಗಿಂತ 100 ವರ್ಷ ಶೈಕ್ಷಣಿಕದಲ್ಲಿ ಮುಂದಿದೆ.

ಉಪಾಧ್ಯಕ್ಷರು:– ಮಾನ್ಯ ಬಿ. ಆರ್.ಪಾಟೀಲ್‌ರವರೆ, ಮಾತನಾಡುವವರು ಇನ್ನು 8 ಜನ ಇದ್ದಾರೆ. ನೀವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಅರ್ಧಗಂಟೆ ಆಯಿತು. ಪೂರ್ಣ ಪ್ರಮಾಣದ ಸಮಯವನ್ನು ನೀವು ಈ ರೀತಿಯಾಗಿ ತೆಗೆದುಕೊಂಡರೆ ಹೇಗೆ? ಇನ್ನೊಂದು ನಿಲುವಳಿ ಸೂಚನೆ ಇದೆ. ಅದರ ಬಗ್ಗೆ ಕೂಡ ಮಾತನಾಡುವವರು ಸಹ ಇದ್ದಾರೆ.

ಶ್ರೀ ಬಿ.ಆರ್. ಪಾಟೀಲ್ :– 16 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ.

ಉಪಾಧ್ಯಕ್ಷರು:– ಹಾಗೆಂದು ರಾತ್ರಿಯೆಲ್ಲಾ ಮಾತನಾಡುವುದಕ್ಕೆ ಆಗುತ್ತದೆಯೇ? ಇದು ಬಹಳ ಅನ್ಯಾಯವಾಯಿತು. ಮಾತನಾಡುವುದಕ್ಕೆ ಅವಕಾಶ ಕೊಡಲೇ ಬಾರದೆಂದೆನಿಸುತ್ತದೆ.

ಶ್ರೀ ಬಿ.ಆರ್.ಪಾಟೀಲ್:– ನಂಜುಂಡಪ್ಪ ವರದಿಯಲ್ಲಿ ಯಾವ ರೀತಿಯಾಗಿ ಅನ್ಯಾಯವಾಗುತ್ತದೆಂದು ನಾನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು:– ಬೇಗ ಮುಗಿಸಿ. ಬೇರೆಯವರು ಇನ್ನೂ ಮಾತನಾಡಬೇಕಲ್ಲವೇ? ಮಾತನಾಡತಕ್ಕಂಥವರು ಇನ್ನೂ ಐದಾರು ಜನ ಇದ್ದಾರೆ. ಅವರು ಅವರು ಯಾವಾಗ ಮಾತನಾಡಬೇಕು? ಸ್ಪೀಕರ್‌ರವರು ಇದ್ದಾಗ ಒಂದು ಗಂಟೆಗಿಂತ ಹೆಚ್ಚು ಮಾತನಾಡುವುದಿಲ್ಲವೆಂದು ನೀವು ಹೇಳಿದ್ದೀರಿ.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಈ ಮಾತನ್ನು ನಾನು ಹೇಳಿಲ್ಲ.

ಉಪಾಧ್ಯಕ್ಷರು:– 4.45 ಗಂಟೆಗೆ ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಈಗಾಗಲೇ 5.30 ಗಂಟೆ ಆಯಿತು. ಎಲ್ಲರೂ ಹೇಳಿದ್ದಕ್ಕೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವುದು. ಇಲ್ಲದಿದ್ದರೆ ಅವಕಾಶ ಕೊಡುತ್ತಿರಲಿಲ್ಲ.

ಶ್ರೀ ಬಿ.ಆರ್. ಪಾಟೀಲ್:– ನಾನು ಈ ಮಾತನ್ನು ಹೇಳಿಲ್ಲ.

ಉಪಾಧ್ಯಕ್ಷರು:– ತಾವು ಬೇಗ ಮುಗಿಸಿ. ನೀವು co-operate ಮಾಡಿ. ಆ ಕಡೆಯವರೂ ಕೂಡ ಮಾತನಾಡುವುದು ಬೇಡವೇ?

ಶ್ರೀ ಬಿ.ಆರ್.ಪಾಟೀಲ್:–ಮಾತನಾಡಬೇಡಿ ಎಂದರೆ ನಾನು ಮಾತನಾಡುವುದಿಲ್ಲ.

ಉಪಾಧ್ಯಕ್ಷರು: ಹಾಗಾದರೆ ಬಿಡಿ. Next ಯಾರು ಮಾತನಾಡುತ್ತಿರಿ?

ಶ್ರೀ ಜೆ.ಸಿ. ಮಾಧುಸ್ವಾಮಿ: ಸರ್ ಒಂದು ನಿಮಿಷ ಬಿ.ಆರ್.ಪಾಟೀಲ್‌ರವರು ಮುಗಿಸಿ ಬಿಡಲಿ.

ಉಪಾಧ್ಯಕ್ಷರು: ನಾನು ಅವರಿಗೆ ಬೇಗ ಮಾತನಾಡಿ ಮುಗಿಸಿ ಎಂದು ಹೇಳಿದ್ದೇನೆ, ಮಾತನಾಡಿಬೇಡಿ ಎಂದು ಹೇಳಿಲ್ಲ. ಇಷ್ಟು ಸೂಕ್ಷ್ಮತೆಯಿಂದ ಕೆಲಸ ಮಾಡುವುದಕ್ಕೆ ಹೋದರೆ ನಿಜವಾಗಲೂ ಬಹಳ ತೊಂದರೆಯಾಗುತ್ತದೆ. ಮಾತನಾಡಬೇಡಿ ಎಂದು ನಾನು ಹೇಳಲ್ಲಿಲ್ಲ. ಕುಳಿತುಕೊಳ್ಳಿ ಎಂದು ನಾನು ಹೇಳಲಿಲ್ಲ. ಹೇಳಿರತಕ್ಕಂಥ ವಿಷಯಕ್ಕೆ ಕೊಟ್ಟಿರತಕ್ಕಂಥ ಸಮಯ ಒಂದು ಗಂಟೆ, ಅದರಲ್ಲಿ ಪೂರ್ತಿ ಮುಗಿಸಬೇಕು. ಜೊತೆಗೆ ಇನ್ನೂ 5–6 ಜನರು ಇದ್ದಾರೆ, ಅವರು ಮಾತನಾಡಬೇಕೆಂದು ನಾನು ಹೇಳಿದೆ. ಪಾಟೀಲ್‌ರೆ, ದಯವಿಟ್ಟು ಬೇರೆಯವರಿಗೂ ಒಂದು ಅವಕಾಶವನ್ನು ಮಾಡಿಕೊಡಿ. ನೀವೇ ಸಮಯವನ್ನು ಕೊಡಿ. ಪಾಟೀಲ್‌ರೆ, ಒಂದು ನಿಮಿಷ ಒಂದು ಪ್ರಕಟಣೆ ಇದೆ.

ಶ್ರೀ ಬಿ.ಆರ್.ಪಾಟೀಲ್: ಸರ್ಕಾರದವರು ದುಡ್ಡು ಬಿಡಗಡೆ ಮಾಡಿದ್ದಾರೆ, ಅದರಲ್ಲಿ ಕೂಡ ನಮಗೆ ಬಹಳ ದೊಡ್ಡ ಅನ್ಯಾಯವಾಗಿದೆ. ಅದರಲ್ಲಿ ನಮಗೆ ಎಷ್ಟು ದುಡ್ಡು ಬಿಡುಗಡೆ ಮಾಡಬೇಕಾಗಿತ್ತು, ಅಷ್ಟು ದುಡ್ಡು ಬಿಡುಗಡೆ ಮಾಡಿಲ್ಲ. ನಂಜುಂಡಪ್ಪ ವರದಿಯ ಪ್ರಕಾರ ನಾನು ಹೇಳುತ್ತೇನೆ, 24 ಇಲಾಖೆಗಳಿಗೆ ಶಿಫಾರಸ್ಸು ಮಾಡಿದ್ದಾರೆ. ಆದರೆ ಈ ಬಂದಂಥ ಹಣವನ್ನು ಸಮಾನವಾಗಿ ಹಂಚಬೇಕು ಎನ್ನುವಂಥ ಮಾತನ್ನು ಹೇಳಿದ್ದಾರೆ. ಸಮಾನವಾಗಿ ಹಣವನ್ನು ಹಂಚುತ್ತಿಲ್ಲ. ಇಲ್ಲಿ ಬೇಕಾಬಿಟ್ಟಿ ಹಣ ಹಂಚುವಂಥ ಕೆಲಸ ನಡೆದಿದೆ. ನಾನು ಸಲಹೆ ಕೊಡುತ್ತೇನೆ. ಮಾನ್ಯ ರಾಮಚಂದ್ರಗೌಡರೆ, ತಾವು ಯೋಜನಾ ಮಂತ್ರಿಗಳು. ನಂಜುಂಡಪ್ಪ ಕಮಿಟಿಯಲ್ಲಿ ಸದಸ್ಯರಾಗಿ ಕೆಲಸ ಮಾಡಿದಂಥ ಸದಸ್ಯರು ಇವತ್ತು ಇದ್ದಾರೆ. ಡಾ: ಅಬ್ದುಲ್ ಅಜೀಜ್ ಇದ್ದಾರೆ, ಡಾ:ಶೇಷಾದ್ರಿ ಇದ್ದಾರೆ. ಇನ್ನೂ ಕೆಲವರು ಇದ್ದಾರೆ. ಅವರನ್ನು ನಿಮ್ಮ ಹತ್ತಿರ ಕರೆಯಿರಿ, ನಿಮ್ಮ ಯೋಜನಾ ಮಂಡಳಿಯ ಅನುಷ್ಠಾನ ಸಮಿತಿ ಅಧ್ಯಕ್ಷರು ಇದ್ದಾರೆ. ಇವರನ್ನು ಕೂಡಿಸಿಬಿಟ್ಟು ಮತ್ತು ಇದಕ್ಕೆ ಲೇಖನವನ್ನು ಬರೆದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಂಥ ಡಾ: ಚಂದ್ರಶೇಖರ್‌ರವರು ಹಂಪಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿದ್ದಾರೆ. ಈ ತಜ್ಞರನ್ನು ಕರೆಸಿ ಎಲ್ಲಿ ನ್ಯೂನತೆ ಆಗಿದೆ, ಎಲ್ಲಿ ಏನು ದಾರಿ ತಪ್ಪುತ್ತಿದೆ, ಯಾವ ತರಹ ಮಾಡಬೇಕು, ನಂಜುಂಡಪ್ಪ ಸಮಿತಿ ಶಿಫಾರಸ್ಸು ಏನು ಹೇಳುತ್ತದೆ, ಯಾವ ತರಹ ಸರ್ಕಾರ ಮಾಡುತ್ತಿದೆ ಎಂಬುದರ ಬಗ್ಗೆ ಅವರ ಮುಕ್ತವಾದ ಸಲಹೆ ಸೂಚನೆಗಳನ್ನು

ದಯಮಾಡಿ ತೆಗೆದುಕೊಳ್ಳಿ. ಏಕೆಂದರೆ ಒಂದು ಸಲ ಇದು ದಾರಿ ಬಿಟ್ಟರೆ ಇದು ಎಲ್ಲೆಲ್ಲಿಯೋ ಹೋಗಿ ನಿಲ್ಲುತ್ತದೆ. ಹೈದ್ರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಲಿ ಕೂಡ ಪ್ರಾರಂಭದಲ್ಲಿ ಯಾವತರಹ ಹೊರಟಿತ್ತು, ನಂತರ ದಾರಿ ಬಿಟ್ಟು ಹೋಯಿತು. ಬರೀ ನಾವು ದೇವಸ್ಥಾನಗಳಿಗೆ ಕೊಟ್ಟೆವು, ಆಗಸೆ ಬಾಗಿಲಿಗೆ ಕೊಟ್ಟೆವು, ಕಲ್ಯಾಣ ಮಂಟಪಕ್ಕೆ ಕೊಟ್ಟೆವು. ಆದರೆ ಮೂಲಭೂತ ಸೌಕರ್ಯಗಳಿಗೆ ನಾವು ಗಮನ ಕೊಡಲಿಲ್ಲ. ಇವತ್ತು ನಂಜುಂಡಪ್ಪನವರು 24 ಕ್ಷೇತ್ರಗಳಲ್ಲಿ ಹಣವನ್ನು ಖರ್ಚು ಮಾಡಬೇಕೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ರಾಮಚಂದ್ರಗೌಡರಿಗೆ, ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನೀವು ದಯಮಾಡಿ ಎಲ್ಲಾ ತಜ್ಞರ ಒಂದು ಸಭೆಯನ್ನು ಕರೆಯಿರಿ. ಯಾವ ತರಹ ಇದನ್ನು ಅನುಷ್ಠಾನಗೊಳಿಸಬೇಕು? ನಂಜುಂಡಪ್ಪ ಆಯೋಗದ ಸೂತ್ರದ ಮೂಲ ಏನು? ಸರ್ಕಾರ ಹೊರಡಿಸಿರುವ ಆದೇಶ ಏನು? ಇದಕ್ಕೆ ಯಾವ ಒಂದು ನ್ಯೂನ್ಯತೆ ಇದೆ? ಇದರ ಬಗ್ಗೆ ಒಂದು ಸೂಕ್ತವಾದ ಆದೇಶವನ್ನು ಹೊರಡಿಸಿದರೆ, ಇದರಲ್ಲಿ ಅನ್ಯಾಯವನ್ನು ತಡೆಗಟ್ಟಲಿಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಬಹಳ ಮುಖ್ಯವಾಗಿ ಇವತ್ತು ಬೆಳಗ್ಗೆ ಚರ್ಚೆಯಾಯಿತು. ಉನ್ನತ ಶಿಕ್ಷಣ ಸಚಿವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ನಂಜುಂಡಪ್ಪ ವರದಿಯಲ್ಲಿ ಒಂದು ಮಾತನ್ನು ಹೇಳುತ್ತಾರೆ. ಕೇಂದ್ರೀಯ ವಿಶ್ವವಿದ್ಯಾನಿಲಯವನ್ನು ಈ ಭಾಗದಲ್ಲಿ ಸ್ಥಾಪನೆ ಮಾಡಬೇಕೆಂದು ಹೇಳಿ ಬಹಳ ಪೂರಕವಾದ ಒಂದು ಪ್ರತಿಕ್ರಿಯೆಯ ಮಾತನ್ನು ಕೊಟ್ಟಿದ್ದಾರೆ ಮತ್ತು ಅದನ್ನು ನಡೆಸಿಕೊಡುವ ಮತ್ತು ಕೊಡುವ ಭರವಸೆಯನ್ನು ಕೊಟ್ಟಿದಾರೆ, ಅದಕ್ಕಾಗಿ ನಾನು ಅಭಿನಂದಿಸುತ್ತೇನೆ. ಮಾನ್ಯ ವೈಜನಾಥ್ ಪಾಟೀಲ್‌ರವರು ಪದೇ ಪದೇ ಹೇಳುತ್ತಿರುತ್ತಾರೆ. 371ನೇ ಕಲಂಗೆ ತಿದ್ದುಪಡಿಗೆ ಸರ್ಕಾರದ ಯಾವುದೇ ಒಂದು ಗಂಭೀರತೆ ಇಲ್ಲ. ಇದರ ಬಗ್ಗೆ ಬಹುಶಃ ಬಹಳ ಜನರಿಗೆ ಒಂದು ತಪ್ಪು ತಿಳುವಳಿಕೆಯಾಗಿದೆ. 371ನೇ ಕಲಂ ತಿದ್ದುಪಡಿಯಾದರೆ, ಬರೀ ಹೈದ್ರಾಬಾದ್–ಕರ್ನಾಟಕಕ್ಕೆ ಲಾಭವಾಗುತ್ತದೆ ಮತ್ತು ಅವರಿಗೆ ಅನುಕೂಲವಾಗುತ್ತದೆ ಎಂದು ಇದು ಇಲ್ಲ. ಇದು ನಮ್ಮ ರಾಜ್ಯ ಸರ್ಕಾರ ತನಗೆ ಬಂದಂಥ ಅಧಿಕಾರದ ವ್ಯಾಪ್ತಿಯಲ್ಲಿ ವಿಶೇಷವಾದ ಕಾನೂನುಗಳನ್ನು ಮಾಡಿ ಆಯಾ ಪ್ರದೇಶಗಳಿಗೆ ಸಹಾಯ ಮಾಡುವ ಅಧೀಕಾರವನ್ನು ಹೊಂದುವಂಥದ್ದು ಅದು ಕಲಂ 371ರ ಕೆಳಗಡೆ

ನಮಗೆ ಅಧಿಕಾರವನ್ನು ಚಲಾಯಿಸುವುದಕ್ಕೆ ಸಹಾಯವಾಗುತ್ತದೆ. ಹಿಂದೆ ಬಂಗಾರಪ್ಪನವರು ಗ್ರಾಮೀಣ ಕೃಪಾಂಕವನ್ನು ಕೊಟ್ಟರು, ಅನೇಕ ಗ್ರಾಮೀಣ ಭಾಗದ ಹುಡುಗರು ಕೆಲಸಕ್ಕೆ ಹೋದರು. Judges ಆದರು. ಎಷ್ಟೋ ಜನರು ಶಿಕ್ಷಕರಾದರು. ದೊಡ್ಡ ದೊಡ್ಡ ಹುದ್ದೆಗಳಿಗೆ ಹೋದರು. ಕಡೆಗೆ ಅದು ಕೋರ್ಟಿಗೆ ಹೋಗಿಬಿಟ್ಟು ರದ್ದಾಯಿತು, ಅದನ್ನು ಕೋರ್ಟ್ ನಿಲ್ಲಿಸಿಬಿಟ್ಟಿತು. ಆ ಕಾರಣಕ್ಕಾಗಿ ಪಾಪ Judges ಆಗಿ ಹೋದವರು, ಅವರು ಮನೆಯಲ್ಲಿ ಇರಬೇಕಾಯಿತು. ಒಂದು ವೇಳೆ ಕಲಂ 371ಕ್ಕೆ ತಿದ್ದುಪಡಿಯಾಗಿದ್ದರೆ, ಇವತ್ತು ಆ ಸಮಸ್ಯೆ ಬರುತ್ತಿರಲಿಲ್ಲ. ಇವತ್ತು ಮಾನ್ಯ ಹೊರಟ್ಟಿಯವರು ಒಂದು ಬಿಲ್ ತಂದರು. ಇದರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆಯಾಯಿತು, ಅದಕ್ಕೆ ಪರ ವಿರೋಧವು ಬಂತು. ಶೈಕ್ಷಣಿಕವಾಗಿ ಹಿಂದುಳಿದ ನಮ್ಮಂಥ ಪ್ರದೇಶದಲ್ಲಿ ಯಾರೂ ಕೂಡ ಮೆರಿಟ್‌ನಲ್ಲಿ ಪಾಸಾಗುವುದಿಲ್ಲ. ಏಕೆಂದರೆ ಅದರ ಹಿನ್ನೆಲೆ ಅದೇ ತರಹ. ಹಾಗಾಗಿ ಇವತ್ತು ಎಲ್ಲಾ ನೌಕರಿ ಮಾಡುವವರು, ಎಲ್ಲಾ ಸರ್ಕಾರಿ ಕೆಲಸಕ್ಕೆ ಬರುವವರು ಹಳೇ ಮೈಸೂರಿನವರು ಬರುತ್ತಾರೆ. ಅವರು ಬಂದು ಕೆಲವು ದಿವಸ ಕೆಲಸವನ್ನು ಮಾಡಿಬಿಟ್ಟು ನಮ್ಮಂಥವರನ್ನು ಅಥವಾ ರಾಜಕೀಯ ಪುಢಾರಿಗಳನ್ನು ಹಿಡಿದುಬಿಟ್ಟು, ವರ್ಗಾವಣೆ ಮಾಡಿಕೊಂಡು ಮತ್ತೆ ವಾಪಸ್ಸು ಹೋಗುತ್ತಾರೆ. ಹಾಗಾಗಿ ನಮ್ಮ ಮಕ್ಕಳಿಗೆ ಇವತ್ತು ಸರಿಯಾದ ವಿದ್ಯಾಭ್ಯಾಸವನ್ನು ಕೊಡುವುದಕ್ಕಾಗುವುದಿಲ್ಲ. ಆ ಕಾರಣಕ್ಕಾಗಿ ನಂಜುಂಡಪ್ಪನವರಿಗೆ ನಾವು ಇವತ್ತು ಅಭಿನಂದಿಸಬೇಕು. ಅವರು ಎಷ್ಟು ದೂರದೃಷ್ಟಿ ಇಟ್ಟುಕೊಂಡು ಈ ಮಾತನ್ನು ಹೇಳಿದ್ದಾರೆಂದರೆ, 371ರ ಕಲಂಗೆ ತಿದ್ದುಪಡಿಯನ್ನು ತರುವುದು ಕೂಡ ಅವಶ್ಯಕತೆ ಇದೆ ಎನ್ನುವ ಮಾತನ್ನು ಮಾನ್ಯ ನಂಜುಂಡಪ್ಪನವರು ಹೇಳಿದ್ದಾರೆ. ಆ ಪ್ರಕಾರ ಇವತ್ತು ಸರ್ಕಾರದವರು, ಸರ್ವಪಕ್ಷ ನಿಯೋಗವೆಂದರೆ ನಾನು ಒಪ್ಪುವುದಿಲ್ಲ. ಏಕೆಂದರೆ ಎಲ್ಲಾ ಶಾಸಕರು ಯಾವ ತರಹ ಕೇರಳದ ಮುಖ್ಯಮಂತ್ರಿ ಒಂದು ಸಂದರ್ಭದಲ್ಲಿ ಹೇಳಿದರು, "ನಾನು ಪ್ರಧಾನಮಂತ್ರಿಯವರ ಮನೆಯ ಎದುರುಗಡೆ ಹೋಗಿ ಪ್ರತಿಭಟನೆ ಮಾಡುತ್ತೇನೆ" ಎನ್ನುವ ಧೈರ್ಯದ ಮತ್ತು ಕೆಚ್ಚಿನ ಮಾತನ್ನು ಹೇಳಿದರು. ಏಕೆ ಎಂದರೆ, ರಾಜ್ಯದ ಹಿತವನ್ನು ಕಾಪಾಡುವುದಕ್ಕೆ, ನಿಮಗೂ ಒಂದು ಕಳಕಳಿ ಹಾಗೂ ಕಾಳಜಿ ಇದ್ದಿದ್ದರೆ ನಡೆಯಿರಿ ಎಲ್ಲರೂ ಸರ್ಕಾರದ ಹತ್ತಿರ ಹೋಗೋಣ. ನಮಗೆ 371ರ ಕಲಂಗೆ

ತಿದ್ದುಪಡಿಯನ್ನು ಮಾಡಿಕೊಡಲೇಬೇಕು ಎಂದು ಹೇಳಿ ಪಾರ್ಲಿಮೆಂಟ್ ಎದುರುಗಡೆ ಧರಣಿಯನ್ನು ಮಾಡೋಣ. ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ದೊಡ್ಡ ನ್ಯಾಯವನ್ನು ಒದಗಿಸುವಂಥ ಕೆಲಸವನ್ನು ಮಾಡೋಣ. ಆ ಕೆಲಸಕ್ಕೆ ಸರ್ಕಾರದವರು ಇವತ್ತು ತಯಾರಾಗಬೇಕು. ಇದನ್ನು ಮಾಡಲೇಬೇಕು. ಇವತ್ತು ನಾವು ಕೇರಳದ ಮುಖ್ಯಮಂತ್ರಿಗಳಾದ ಅಚ್ಯುತಾನಂದರವರಿಗೆ ಅಭಿನಂದಿಸಬೇಕು. ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಧಾನ ಮಂತ್ರಿಗಳ ಮನೆಯ ಎದುರುಗಡೆ ಹೋಗಿ ಧರಣಿ ಮಾಡುತ್ತೇನೆ ಎನ್ನುವ ಮಾತನ್ನು ಹೇಳಬೇಕಾದರೆ, ಎಷ್ಟು ಅವರಿಗೆ ಕೆಚ್ಚು ಮತ್ತು ಧೈರ್ಯ ಮತ್ತು ರಾಜ್ಯದ ಬಗ್ಗೆ ಎಷ್ಟು ಕಳಕಳಿ ಇದೆ ಎನ್ನುವುದನ್ನು ನಾವು ಮೆಚ್ಚಬೇಕು. ಆ ಪ್ರಕಾರ 371ರ ಕಲಂಗೆ ತಿದ್ದುಪಡಿ ಇವತ್ತು ಮಾಡಬೇಕಾಗಿದ್ದರೆ ನಾವೆಲ್ಲ 224 ಜನ ಶಾಸಕರು ಪಾರ್ಲಿಮೆಂಟಿಗೆ ಹೋಗಿ, ಪ್ರತಿಭಟನೆಯನ್ನು ಮಾಡಿ ನಮಗೆ ನ್ಯಾಯವನ್ನು ಒದಗಿಸಿಕೊಡದೇ ಹೋದರೆ ಸಮಸ್ಯೆ ಖಾಯಂ ಆಗಿ ಅದು ಪಾವಗಡದವರೆಗೆ ಸಮಸ್ಯೆಯಾಗುತ್ತದೆ. ಈ ಕಡೆ ಗುಬ್ಬಿಯವರೆಗೆ ಆಗುತ್ತದೆ, ಈ ಕಡೆ ಕನಕಪುರದವರೆಗೆ ಆಗುತ್ತದೆ. ಈ ತರಹ ರಾಜ್ಯದ ಎಲ್ಲಾ ಅನೇಕ ಭಾಗಗಳಿಗೆ ಅನ್ಯಾಯವಾಗುತ್ತದೆ. ಅಂತಹ ಕಾನೂನನ್ನು ರೂಪಿಸಿಕೊಳ್ಳುವುದಕ್ಕೆ ಈ ಕಾನೂನಿಗೆ ತಿದ್ದುಪಡಿ ಮಾಡಬೇಕಾದುದು ಅವಶ್ಯಕತೆ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತು ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಒಂದು ಪ್ರಕಟಣೆ ಇದೆ.

15. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮ-118ರ ಮೇರೆಗೆ ವಿಧಾನ ಪರಿಷತ್-2007ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ದಿನಾಂಕ 2ನೇ ಆಗಸ್ಟ್ 2007 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.